WPP No. SK/MNG/WPP/69 D.O.P - 15th of every month from Udupi HPO
ಬೆಲೆ ರೂ.2.50


# ಶ್ರೀ ಶಾರದಾ

ಮಾಸಪತ್ರಿಕೆ – 15 ಆಗಸ್ಟ್ 2011

॥ ಧಿಯೋ ಯೋನಃ ಪ್ರಚೋದಯಾತ್ ॥

**ಹೆಬ್ಬಾರ್ ಎಂಟರ್‌ಪ್ರೈಸಸ್**
ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ – 576 101.
ಶುಭ ಸಮಾರಂಭಗಳಿಗೆ ಬೇಕಾಗುವ ಕ್ಯಾಟರಿಂಗ್ ವ್ಯವಸ್ಥೆ, ಶಾಮಿಯಾನ, ಗ್ಯಾಸ್ ಸ್ಟವ್, ಟೇಬಲ್, ಕುರ್ಚಿ, ಪಾತ್ರೆಗಳು ಹಾಗೂ ಇನ್ನಿತರ ಎಲ್ಲಾ ವ್ಯವಸ್ಥೆಗಳನ್ನೂ ಸಕಾಲದಲ್ಲಿ ಒದಗಿಸಲಾಗುವುದು.
ಫೋನ್ : 2531493 (O), 2530851 (R), ಮೊಬೈಲ್ : 94484 37893

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754
ಸಂಪುಟ-11 ಸಂಚಿಕೆ-8 ಪುಟಗಳು-8 Registered Under No.J/UDP/1260/2009-2011 Dated from 01-12-2008 to 31-12-2011

ಶ್ರೀ ಕೃಷ್ಣಾಯನ – ಕೆ. ಆತ್ಮಾರಾಮ ಶಾಸ್ತ್ರಿ, ಬೆಂಗಳೂರು ಪುಟ-2
ಜಗದ್ಗುರುಗಳವರ ಚಾತುರ್ಮಾಸ್ಯ ವ್ರತ – ಡಾ। ಎಚ್.ವಿ.ನರಸಿಂಹಮೂರ್ತಿ, ಪುಟ-3

ಕವಿಕಾವ್ಯ ಪರಿಚಯ-೧ : ಕವಿವರ ಲಕ್ಷ್ಮೀಶ – ಹರಿದಾಸ ಮ.ನಾ.ಹೆಬ್ಬಾರ ಪುಟ-5
ಕವನ ಮಗಳಿಗೆ – ಸಂಗ್ರಹ : M.N.S. ಪುಟ-7

## ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ (ರಿ.), ಮಂಗಳೂರು : ವಾರ್ಷಿಕ ಮಹಾಸಭೆ




ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ (ರಿ.), ಮಂಗಳೂರು ಇದರ 74ನೇ ವರ್ಷದ 2010–11ನೇ ಆರ್ಥಿಕ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯು ತಾ.3–7–2011ರ ಆದಿತ್ಯವಾರ ಶ್ರೀ ಸುಬ್ರಹ್ಮಣ್ಯ ಸಭಾ ಸದನ, ಬಿಜೈ ರಸ್ತೆ, ಮಂಗಳೂರು ಇಲ್ಲಿ ಸಂಘದ ಉಪಾಧ್ಯಕ್ಷರಾದ ಶ್ರೀ ಎಂ.ಎಸ್.ರಘುನಾಥ್ ರಾವ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು.

ಬೆಳಿಗ್ಗೆ 9–30ಕ್ಕೆ ಸತ್ಯನಾರಾಯಣ ಸ್ವಾಮಿ ಪೂಜಾ ಕಾರ್ಯಕ್ರಮ ನೆರವೇರಿತು. ಪೂರ್ವಾಹ್ನ 11ಕ್ಕೆ ಕು। ಅಶ್ವಿತಾರವರ ಪ್ರಾರ್ಥನೆಯೊಂದಿಗೆ ಮಹಾಸಭೆ ಪ್ರಾರಂಭಗೊಂಡಿತು. ಸಭೆಯ ಅಧ್ಯಕ್ಷತೆ ವಹಿಸಿದ್ದ ಶ್ರೀ ಎಂ.ಎಸ್.ರಘುನಾಥ್ ರಾವ್‌ರವರು ಸಭೆಗೆ ಆಗಮಿಸಿದ್ದ ಸರ್ವಸದಸ್ಯರನ್ನು ಸ್ವಾಗತಿಸುತ್ತಾ, ಸಂಘವು ಪ್ರಸಕ್ತ ಸಾಲಿನಲ್ಲಿ ಸಾಧಿಸಿದ ಗುರಿಗಳನ್ನು ವಿವರಿಸಿದರು. ಈ ಸಾಧನೆಗೆ ಮುಖ್ಯ ಕಾರಣಕರ್ತರಾದ ಎಲ್ಲಾ ಸದಸ್ಯರು, ಠೇವಣಿದಾರರು, ಸಾಲಗಾರರನ್ನು ಅಭಿನಂದಿಸಿದರು ಹಾಗೂ ಸಂಘವು ಮುಂದೆ ಇನ್ನೂ ಹೆಚ್ಚಿನ ಗುರಿ ಸಾಧಿಸಲು ಎಲ್ಲರ ಸಹಕಾರ ಅಗತ್ಯ ಎಂದರು.

ಇತ್ತೀಚೆಗೆ ದೈವಾಧೀನರಾದ ಸಂಘದ ಸ್ಥಾಪಕ ಕಾರ್ಯದರ್ಶಿಗಳಾದ ಶತಾಯುಷಿ ಶ್ರೀಯುತ ಎನ್.ವಿ. ಉಪಾಧ್ಯಾಯರವರಿಗೆ ಸಂಘದ ಪರವಾಗಿ ಶ್ರದ್ಧಾಂಜಲಿ ಅರ್ಪಿಸಲಾಯಿತು. ಸಂಘದ ನಿರ್ದೇಶಕರಾದ ಶ್ರೀ ಅನಿಲ್ ರಾವ್‌ರವರು ಶ್ರೀಯುತರು ಸಂಘಕ್ಕೆ ನೀಡಿದ ಕೊಡುಗೆಗಳನ್ನು ಸ್ಮರಿಸುತ್ತಾ ಅವರ ಪರಿಚಯ ಮಾಡಿಕೊಟ್ಟರು. ಸಭೆಯು ಒಂದು ನಿಮಿಷ ಮೌನ ಆಚರಿಸುವ ಮೂಲಕ ಅಗಲಿದ ಹಿರಿಯ ಚೇತನಕ್ಕೆ ಶ್ರದ್ಧಾಂಜಲಿ ಅರ್ಪಿಸಿತು.

ಸಂಘದಲ್ಲಿ ಒಂದು ಲಕ್ಷಕ್ಕೂ ಹೆಚ್ಚು ನಿರಖು ಠೇವಣಿಯಿಟ್ಟ ಠೇವಣಿದಾರರಿಗೆ ಈ ಸಂದರ್ಭದಲ್ಲಿ ಗೌರವ ಅರ್ಪಿಸಲಾಯಿತು. ಸಂಘದ ನಿರ್ದೇಶಕರಾದ ಶ್ರೀ ಪ್ರದೀಪ್ ರಾವ್‌ರವರು ಠೇವಣಿದಾರರ ಹೆಸರುಗಳನ್ನು ಓದಿದರು.

ಸಂಘದ 2010–11ನೇ ಸಾಲಿನ ಆಡಳಿತ ಮಂಡಳಿ ವರದಿಯನ್ನು ಸಂಘದ ನಿರ್ದೇಶಕರಾದ ಶ್ರೀ ಚೇತನ್ ಶರ್ಮರವರು ಮಂಡಿಸಿದರು. ಸಂಘವು ವರದಿ ಸಾಲಿನಲ್ಲಿ ರೂ.1,24,657/- ತಾತ್ಕಾಲಿಕ ಲಾಭಗಳಿಸಿದ್ದು ಸಂಘದ ಈ ಸಾಲಿನ ಆಡಿಟ್‌ಗೊಳಪಟ್ಟು ಸದಸ್ಯರಿಗೆ ಶೇ.5 ಡಿವಿಡೆಂಡ್ ನೀಡಬಹುದೆಂದು ಘೋಷಿಸಲಾಯಿತು.

ಸಂಘದ ಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀ ಎಂ.ಬಿ.ರಾಜೇಶ್‌ರವರು 2011–12ನೇ ಸಾಲಿನ ಸಂಘದ ಆಯ–ವ್ಯಯ ಮಂಡಿಸಿದರು. ನಂತರ ಉದ್ದೇಶಿತ ಬೈಲಾ ತಿದ್ದುಪಡಿಯನ್ನು ಸರ್ವಸದಸ್ಯರ ಒಪ್ಪಿಗೆಯೊಂದಿಗೆ ಅಂಗೀಕರಿಸಲಾಯಿತು.

ಸಂಘದ ಮುಖ್ಯ ಸಲಹೆಗಾರರಾದ ಶ್ರೀ ಮೋಹನ್‌ರಾವ್‌ರವರು ಸಮಾರಂಭ ದಲ್ಲಿ ಹಾಜರಿದ್ದ ಎಲ್ಲಾ ಸದಸ್ಯರಿಗೂ ವಂದಿಸಿದರು.

## ಸಾಂಸ್ಕೃತಿಕ ಕಲಾಕೇಂದ್ರ ಬೊಳುವಾರು



ಇತ್ತೀಚೆಗೆ ಸಾಂಸ್ಕೃತಿಕ ಕಲಾಕೇಂದ್ರ ಬೊಳುವಾರು, ಪುತ್ತೂರು ಇವರ ಸಾರಥ್ಯದಲ್ಲಿ ಬಾರಿಸು ಕನ್ನಡ ಡಿಂಡಿಮ ಶತಕ ಸಂಭ್ರಮ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭದ ಸಂದರ್ಭದಲ್ಲಿ ಕಾಸರಗೋಡಿನ ಸಂಗೀತ ವಿದುಷಿ ಶ್ರೀಮತಿ ರಾಧಾ ಮುರಳೀಧರ್ ಇವರನ್ನು 'ಸಾಧನಾಶ್ರೀ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

## ಸುಳ್ಯ ಇನ್ನರ್ ವೀಲ್ ಪದಗ್ರಹಣ




ಸುಳ್ಯ ಇನ್ನರ್ ವೀಲ್ ಕ್ಲಬ್ಬಿನ 2011–12ನೇ ಸಾಲಿನ ಅಧ್ಯಕ್ಷೆಯಾಗಿ ಶ್ರೀಮತಿ ಶಶಿಕಲಾ ಹರಪ್ರಸಾದ್‌ರವರು ಆಯ್ಕೆಯಾಗಿ ಅಧಿಕಾರ ಸ್ವೀಕರಿಸಿದರು. ಡಾ। ಹರಪ್ರಸಾದ್ ತುದಿಯಡ್ಕ ಇವರ ಧರ್ಮಪತ್ನಿಯಾದ ಶ್ರೀಮತಿ ಶಶಿಕಲಾರವರು ಜುಲೈ 6ರಂದು ನಡೆದ ಪದಗ್ರಹಣ ಸಮಾರಂಭದಲ್ಲಿ ಅಧಿಕಾರ ಸ್ವೀಕರಿಸಿದರು.

2009–10ರಲ್ಲಿ ಉಪಾಧ್ಯಕ್ಷೆಯಾಗಿ, 2010–11ರಲ್ಲಿ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿ ಅನುಭವವಿರುವ ಶ್ರೀಮತಿ ಶಶಿಕಲಾರವರಿಗೆ ಪುತ್ತೂರು ಇನ್ನರ್‌ವೀಲ್ ಕ್ಲಬ್ಬಿನ ಅಧ್ಯಕ್ಷೆ ಶ್ರೀಮತಿ ವೀಣಾ ಕೆಳತ್ತಾಯರವರು ಪಿನ್ ತೊಡಿಸಿ ಪದಗ್ರಹಣ ನೆರವೇರಿಸಿದರು.

## ಸ್ಥಾನಿಕ ಬ್ರಾಹ್ಮಣ ಸಭಾ, ಪಡುಬಿದ್ರಿ : ಪ್ರಥಮ ವಾರ್ಷಿಕೋತ್ಸವ

ಸ್ಥಾನಿಕ ಬ್ರಾಹ್ಮಣ ಸಭಾ, ಪಡುಬಿದ್ರಿ 2010 ಜೂನ್‌ನಲ್ಲಿ ಆರಂಭಗೊಂಡು ಒಂದು ವರ್ಷವಾಗಿದ್ದು ಈ ಪ್ರಯುಕ್ತ ಇದರ ಪ್ರಥಮ ವಾರ್ಷಿಕೋತ್ಸವವು ತಾ.15–5–2011ರಂದು ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನದಲ್ಲಿ ಮಹಿಳಾ ಸದಸ್ಯೆಯ ಪ್ರಾರ್ಥನೆಯೊಂದಿಗೆ ಸಭಾ ಕಾರ್ಯಕ್ರಮ ಪ್ರಾರಂಭವಾಯಿತು. ಕಾರ್ಯದರ್ಶಿಯವರು ಒಂದು ವರ್ಷದ ವಿಸ್ತೃತ ವರದಿಯನ್ನು ಸಭೆಯಲ್ಲಿ ಓದಿ, ಸಭೆಯ ಅನುಮೋದನೆ ಪಡೆದರು. ಎಮ್.ಕೆ. ಮೋಹನರಾವ್‌ರವರ ಅಧ್ಯಕ್ಷತೆಯಲ್ಲಿ ಸಭೆ ನಡೆದು, ಪ್ರಮುಖ ವಿಷಯವನ್ನು ಚರ್ಚಿಸಲಾಯಿತು. ಸಂಘವನ್ನು ರಿಜಿಸ್ಟರ್ ಮಾಡುವುದು, ಸದಸ್ಯತನ ಅಭಿಯಾನ, ಸಂಘದ ವ್ಯಾಪ್ತಿಯನ್ನು ವಿಸ್ತಾರಗೊಳಿಸುವುದು, ವಿದ್ಯಾರ್ಥಿ ವೇತನ ನಿಧಿಗೆ ಸ್ವಯಂಪ್ರೇರಿತರಾಗಿ ಹಣ ಕೊಡುವ ದಾನಿಗಳನ್ನು ಗುರುತಿಸುವುದು ಇತ್ಯಾದಿ ನಿರ್ಣಯಗಳನ್ನು ತೀರ್ಮಾನಿಸಲಾಯಿತು. ಬೆಳಿಗ್ಗೆ 10 ಗಂಟೆಗೆ ಪ್ರಾರಂಭವಾದ ಸಭೆಯು ಮಧ್ಯಾಹ್ನ 12–30ಕ್ಕೆ ಕಾರ್ಯದರ್ಶಿ ಶ್ರೀ ಸುಧಾಕರ ರಾವ್ ಮುಂಡ್ಕೂರು ಇವರ ಧನ್ಯವಾದದೊಂದಿಗೆ ಮುಕ್ತಾಯವಾಯಿತು.

ವರದಿ : ಶ್ರೀನಿವಾಸ ಶರ್ಮ, ಪಾದೆಬೆಟ್ಟು

## ''ಶ್ರೀ ಶಾರದಾನಗರ'' ನಾಮಕರಣ

ಉಡುಪಿ ನಗರಸಭಾ ವ್ಯಾಪ್ತಿಯ ಕುಂಜಿಬೆಟ್ಟಿನಿಂದ ಬೀಡಿನಗುಡ್ಡೆಗೆ ಹೋಗುವ ರಸ್ತೆಯ ಬಲಭಾಗಕ್ಕೆ ''ಶ್ರೀಶಾರದಾ ನಗರ'' ಎಂದು ನಾಮಕರಣ ಮಾಡಲು ಮಾನ್ಯ ಸರಕಾರದ ಪತ್ರ ಸಂಖ್ಯೆ ನಅಇ.64.ಜಿಇಎಲ್/2011 ದಿನಾಂಕ 13-06-2011ರಲ್ಲಿ ಅನುಮತಿ ನೀಡಿದೆ. ಇದಕ್ಕಾಗಿ ಶ್ರಮಿಸಿದ ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಉಡುಪಿ ಇದರ ಅಧ್ಯಕ್ಷರಾದ ಶ್ರೀ ಸಿ.ಎಸ್.ರಾವ್ ಅವರಿಗೆ ಕೃತಜ್ಞತೆಗಳು.

**ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ(ರಿ.)**
**ಇದರ ಆಶ್ರಯದಲ್ಲಿ**
**ಸೌರ ಋಗುಪಾಕರ್ಮವು**

ತಾ.09-09-2011ರಂದು ಶುಕ್ರವಾರ ಶ್ರೀ ಶಾರದಾ ಮಂಟಪದಲ್ಲಿ ನಡೆಯಲಿದ್ದು ಬೆಳಿಗ್ಗೆ 9-30ರಿಂದ ಕಾರ್ಯಕ್ರಮವು ಪ್ರಾರಂಭವಾಗಲಿದೆ.

*ಸಮಾಜ ಬಾಂಧವರು ಸಮಯಕ್ಕೆ ಸರಿಯಾಗಿ ಬಂದು ಉಪಾಕರ್ಮದಲ್ಲಿ ಭಾಗವಹಿಸಬೇಕಾಗಿ ವಿನಂತಿಸಿಕೊಳ್ಳುತ್ತೇವೆ. ಭಾಗವಹಿಸುವವರು ಹೂ, ತುಳಸಿ, ಹರಿವಾಣ, ಕೌಳಿಗೆಸೌಟನ್ನು ತರಬೇಕಾಗಿ ವಿನಂತಿ.*

– ಕಾರ್ಯದರ್ಶಿ

**ಸಂಪಾದಕ ಮಂಡಳಿ**

ವೈ. ಮೋಹನ ರಾವ್
ಎಚ್.ಎನ್. ಶ್ಯಾನುಭಾಗ್
ಪ್ರಕಾಶ್ ರಾವ್ ಕೋಲ್ಪೆ
ಟಿ. ಸುರೇಶ ರಾವ್ ಅಂಬಾಗಿಲು

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ.

ಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳು ಅಥವಾ ಇತರ ಯಾವುದೇ ವಿಷಯಗಳ ಬಗ್ಗೆ ಅನಿಸಿಕೆಗಳನ್ನು ವಾಚಕರು ನಿಸ್ಸಂಕೋಚವಾಗಿ ಪತ್ರ ಮುಖೇನ ಸಂಪಾದಕ ಮಂಡಳಿಗೆ ತಿಳಿಸಬಹುದು.

-ಸಂ.

## ಚಿಂತನ

ಮೋಸ-ಯುಕ್ತಿ ಇವುಗಳ ನಡುವೆ ಸ್ವಲ್ಪ ಅಂತರವಿದೆ. ಕೆಲವರು ತಾವು ಮಾಡುವ ಮೋಸವನ್ನೇ ಯುಕ್ತಿ ಎಂದು ಭಾವಿಸುವುದಿದೆ. ಅವರು ಮಾಡಿದ ಈ ಕೃತ್ಯಕ್ಕೆ ನಾನೇ ಪ್ರತೀಕಾರವಾಗಿ ಈ ಯುಕ್ತಿಯನ್ನು ಬಳಸಿದೆ ಎಂದು ಹೆಮ್ಮೆ ಪಡುತ್ತಾ ಹೇಳುವುದಿದೆ.


ಉದಾಹರಣೆಗೆ ರಾಮಾಯಣದಲ್ಲಿ ರಾವಣ ಮಾರುವೇಶದಲ್ಲಿ ಬಂದು ಸೀತಾಪಹಾರಗೈದುದು, ಜಟಾಯುವಿನೊಂದಿಗೆ ಯುದ್ಧದಲ್ಲಿ ಮರ್ಮಸ್ಥಾನದ ಬಗ್ಗೆ ಸುಳ್ಳು ಹೇಳಿ ಯುದ್ಧ ಮಾಡಿದ್ದು, ಮಹಾಭಾರತದಲ್ಲಿ ಪಾಂಡವರನ್ನು ಕೊಲ್ಲಲು ದುರ್ಯೋಧನನು ಅರಗಿನ ಅರಮನೆ ನಿರ್ಮಿಸಿದ್ದು, ಅಭಿಮನ್ಯುವನ್ನು ಕೊಲ್ಲುವ ಮೊದಲು ಕರ್ಣ ಹಿಂದಿನಿಂದ ಅವನ ಬಿಲ್ಲ ಛಾಪವನ್ನು ಕತ್ತರಿಸಿದ್ದು..... ಇವೆಲ್ಲವೂ ಯುಕ್ತಿಗಿಂತಲೂ ಮೋಸವೆಂದೇ ಪರಿಗಣಿತವಾಗುತ್ತದೆ.

ಹಾಗೆಯೇ ರಾಮಾಯಣದಲ್ಲಿ ಹನುಮಂತನು ಸುರಸೆಯಿಂದ ರಕ್ಷಿಸಿ ಕೊಳ್ಳಲು ನೂರು ಯೋಜನೆ ಅಗಲವಾದ ಅವಳ ಬಾಯೊಳಗೆ ಅಣುರೂಪಿಯಾಗಿ ಪ್ರವೇಶಿಸಿ ಹೊರ ಬಂದುದು, ರಾವಣನ ಆಸ್ಥಾನ ಪ್ರವೇಶಿಸಿ ನೋಡುವ ಸಲುವಾಗಿ ಅಶೋಕವನ ಲೂಟಿ ಮಾಡಿ ರಾವಣನ ಸೈನಿಕರಿಗೆ ಸೆರೆಸಿಕ್ಕಿದ್ದು, ಶ್ರೀರಾಮ ಚಂದ್ರನು ಮರೆಯಲ್ಲಿ ನಿಂತು ವಾಲಿಗೆ ಮೋಕ್ಷ ಕರುಣಿಸಿದ್ದು, ಮಹಾಭಾರತದಲ್ಲಿ ಶ್ರೀಕೃಷ್ಣನು ತಮ್ಮ ಪಕ್ಷಕ್ಕೆ ಇರಬೇಕೆಂದು ಕರೆಯಲು ಬಂದಾಗ ಶ್ರೀಕೃಷ್ಣನು ನಿದ್ದೆಯಲ್ಲಿದ್ದಂತೆ ನಟಿಸಿದ್ದು, ಸಂಧಾನಕ್ಕಾಗಿ ಶ್ರೀಕೃಷ್ಣ ಕುರು ಚಾವಡಿಗೆ ಬಂದಾಗ ಎದ್ದು ನಿಲ್ಲದೆ ಇದ್ದ ಅಹಂಕಾರಿ ಸುಯೋಧನನು ಸಿಂಹಾಸನ ಸಮೇತವಾಗಿ ಶ್ರೀಕೃಷ್ಣನ ಕಾಲಿಗೆ ಬೀಳುವಂತೆ ಮಾಡಿದ್ದು, ಕರ್ಣನ ಅವಸಾನಕ್ಕಾಗಿ ಯುದ್ಧಭೂಮಿಯಲ್ಲಿ ಬ್ರಾಹ್ಮಣ ರೂಪದ ಕೃಷ್ಣ ಆತನಲ್ಲಿ ಕರ್ಣಕುಂಡಲ ಬೇಡಿದ್ದು, ಎಲ್ಲವೂ ಯುಕ್ತಿ ಎಂದೇ ಪರಿಗಣಿಸಲ್ಪಡುತ್ತದೆ.

ಒಟ್ಟಿನಲ್ಲಿ ಸ್ವಾರ್ಥಕ್ಕಾಗಿ ಮಾಡುವುದು ಮೋಸವೆಂದೂ, ಜಗದ ಹಿತಕ್ಕಾಗಿ ಮಾಡುವುದು ಯುಕ್ತಿ ಎಂದೂ ತಿಳಿಯಬೇಕಾಗಿದೆ. ಪ್ರಕೃತ ಈ ಕಾಲದಲ್ಲಿ ನಾವು ಈ ಬಗ್ಗೆ ಹೆಚ್ಚು ಗಮನವಿಡುವ ಅಗತ್ಯವಿದೆಯಲ್ಲವೆ?

# ಶ್ರೀ ಕೃಷ್ಣಾಯನ

## (ಶ್ರೀ ಮದ್ಭಾಗವತಾನುಸಾರಿ)



- ಕೆ. ಆತ್ಮಾರಾಮ ಶಾಸ್ತ್ರೀ
ಬೆಂಗಳೂರು

(ಹಿಂದಿನ ಸಂಚಿಕೆಯಿಂದ...)

ತಾನು ತನ್ನ ಸ್ವಾಮಿಯ ಜೊತೆಯೇ ಯುದ್ಧ ಮಾಡುತ್ತಿರುವುದಕ್ಕಾಗಿ ಅವನು ಪಶ್ಚಾತ್ತಾಪಪಟ್ಟನು. ಅವನು ಭಗವಂತನ ಸ್ತುತಿಗೈದನು. ಆಗ ದೇವಕೀನಂದನನು ತನ್ನ ಮಂಗಳಕರ ಹಸ್ತದಿಂದ ಜಾಂಬವಂತನ ಮೈಯನ್ನು ನೇವರಿಸಿ ಹೇಳಿದನು, "ಕರಡಿಗಳರಸನೆ, ಈ ಮಣಿಯ ದೆಸೆಯಿಂದಾಗಿ ನನ್ನ ಮೇಲೆ ಅಪವಾದ ಬಂದಿದೆ. ಅದನ್ನು ನಿವಾರಿಸಿಕೊಳ್ಳುವ ಉದ್ದೇಶದಿಂದ ಮಣಿಯನ್ನು ಹುಡುಕುತ್ತ ನಾವೆಲ್ಲ ಇಲ್ಲಿಗೆ ಬಂದಿದ್ದೇವೆ." ಆ ಮಾತನ್ನು ಕೇಳಿದ ಜಾಂಬವಂತನು ಶ್ರೀಕೃಷ್ಣನನ್ನು ಸಮ್ಮಾನಿಸುವ ಸಲುವಾಗಿ ತನ್ನ ಮಗಳಾದ ಜಾಂಬವತಿಯನ್ನೂ, ಆ ಮಣಿಯನ್ನೂ ಅವನಿಗೆ ಕೊಟ್ಟನು. ಹೀಗೆ ಜಾಂಬವಂತನು ಧನ್ಯನಾದನು.

ಇತ್ತ ಹನ್ನೆರಡು ದಿನಗಳವರೆಗೆ ಗುಹೆಯ ಹೊರಗೆ ಕಾದುಕುಳಿತ ಪ್ರಜೆಗಳು ನಿರಾಶೆ ಮತ್ತು ದುಃಖದಿಂದ ತಮ್ಮ ಪಟ್ಟಣಕ್ಕೆ ಹಿಂದಿರುಗಿದರು. ಮತ್ತೆ ಭಗವಂತನ ಕ್ಷೇಮಕ್ಕಾಗಿ ಭಗವತಿ ದುರ್ಗೆಯನ್ನು ಆರಾಧಿಸಿದರು. ದುರ್ಗೆಯು ಪ್ರಸನ್ನಳಾಗಿ ಅವರನ್ನು ಹರಸಿದಳು. ಅಷ್ಟರಲ್ಲಿ ಶ್ರೀಕೃಷ್ಣನು ಜಾಂಬವತಿಯೊಡನೆ ಅವರ ಮುಂದೆ ಕಾಣಿಸಿಕೊಂಡನು. ಎಲ್ಲರೂ ಸಂತೋಷದಿಂದ ಉತ್ಸವವನ್ನಾಚರಿಸಿದರು. ಶ್ರೀಕೃಷ್ಣನು ರಾಜಸಭೆಯಲ್ಲಿ ಸತ್ರಾಜಿತನನ್ನು ಕರೆದು ಮಣಿಯು ಕಳೆದುಹೋದ ಮತ್ತು ಸಿಕ್ಕಿದ ಕಥೆಯನ್ನು ಹೇಳಿ ಅದನ್ನು ಅವನಿಗೆ ಕೊಟ್ಟನು. ಸತ್ರಾಜಿತನು ಮಣಿಯನ್ನು ತೆಗೆದುಕೊಂಡು ನಾಚಿಕೆಯಿಂದ ತಲೆತಗ್ಗಿಸಿಕೊಂಡು ಅಲ್ಲಿಂದ ತನ್ನ ಮನೆಗೆ ಹೋದನು. ಆದರೆ ಅವನಿಗೆ ಮನಶಾಂತಿಯಿಲ್ಲದಾಯಿತು. ಕೃಷ್ಣನಂತಹ ಬಲಶಾಲಿ ವ್ಯಕ್ತಿಯೊಡನೆ ಮನಸ್ತಾಪ ಮಾಡಿಕೊಳ್ಳುವುದು ಅಪಾಯಕ್ಕೆ ಆಹ್ವಾನವಿತ್ತಂತೆ. ತಾನು ಕೃಷ್ಣನನ್ನು ಸಮಾಧಾನ ಪಡಿಸುವುದು ಹೇಗೆಂದು ಯೋಚಿಸಿದನು. ಆಗ ಅವನಿಗೊಂದು ಉಪಾಯ ಹೊಳೆಯಿತು. ಅವನು ಕೂಡಲೆ ತನ್ನ ಮಗಳಾದ ಸತ್ಯಭಾಮೆಯನ್ನೂ, ಸ್ಯಮಂತಕಮಣಿಯನ್ನೂ ಕೃಷ್ಣನಿಗೆ ಅರ್ಪಿಸಿದನು. ಶ್ರೀಕೃಷ್ಣನು ರೂಪ, ಶೀಲ, ಗುಣಗಳಿಂದ ಯೋಗ್ಯಳಾದ ಸತ್ಯಭಾಮೆಯನ್ನು ವಿಧಿವತ್ ಮದುವೆಯಾದನು. ಆದರೆ ಮಣಿಯನ್ನು ಸ್ವೀಕರಿಸಲಿಲ್ಲ. ಅವನೆಂದನು "ಸತ್ರಾಜಿತ, ಈ ಮಣಿಗೆ ನೀನೇ ಅಧಿಕಾರಿ. ಆದರೆ ಅದರಿಂದ ಬರುವ ಚಿನ್ನವನ್ನು ಮಾತ್ರ ನಮಗೆ ಕೊಡುತ್ತಿರು, ಸಾಕು."

### ೧೬

ಹಸ್ತಿನಾವತಿಯಲ್ಲಿ ದುರ್ಯೋದನನಿಗೂ, ಪಾಂಡವರಿಗೂ ಇದ್ದ ಮನಸ್ತಾಪ ಪರಾಕಾಷ್ಠೆಗೆ ತಲುಪಿತು. ಆಗ ಧೃತರಾಷ್ಟ್ರನು ಈ ಕಿರಿಕಿರಿಯಿಂದ ತಪ್ಪಿಸಿಕೊಳ್ಳಲು ಒಂದು ಉಪಾಯ ಹೂಡಿದನು. ಅವನು ಪಾಂಡವರನ್ನು ಇಂದ್ರಪ್ರಸ್ಥದಲ್ಲಿ ನೆಲೆನಿಲ್ಲುವಂತೆ ಏರ್ಪಡಿಸಿ ಅವರನ್ನು ಅಲ್ಲಿಗೆ ಕಳುಹಿಸಿಕೊಟ್ಟನು. ಈ ಸಂದರ್ಭವನ್ನು ಉಪಯೋಗಿಸಿಕೊಂಡು ದುರ್ಯೋಧನನು ಪಾಂಡವರ ನಾಶಕ್ಕೆ ಸಂಚುರೂಪಿಸಿದನು. ತನ್ನ ಮಂತ್ರಿಯಾದ ಪುರೋಚನನ ಮೂಲಕ ವಾರಣಾವತದಲ್ಲಿ ಒಂದು ಅರಗಿನ ಮನೆಯನ್ನು ಕಟ್ಟಿಸಿ ಪಾಂಡವರನ್ನು ಅಲ್ಲಿಗೆ ಕಳುಹಿಸಿದನು. ಅವರು ಆ ಮನೆಯಲ್ಲಿ ರಾತ್ರಿ ಹೊತ್ತು ಮಲಗಿರುವಾಗ ಅರಗಿನ ಮನೆಗೆ ಬೆಂಕಿಯಿಕ್ಕಿ ಅವರನ್ನು ಸುಡುವ ಉದ್ದೇಶ ಅವನಿಗಿತ್ತು. ಆದರೆ ಈ ಸಂಚನ್ನು ವಿದುರನು ಮುಂಚಿತವಾಗಿ ತಿಳಿದಿದ್ದ ಕಾರಣ ಅವರು ಆ ಮನೆಯಿಂದ ಸುರಂಗದ ಮೂಲಕ ತಪ್ಪಿಸಿಕೊಂಡು ಹೋಗಲು ಏರ್ಪಾಡು ಮಾಡಿದನು. ಹಾಗೇ ಭೀಮನು ರಾತ್ರಿ ವೇಳೆಯಲ್ಲಿ ಅರಗಿನ ಮನೆಗೆ ತಾನೇ ಬೆಂಕಿ ಹಾಕಿ ತಾಯಿ ಮತ್ತು ಅಣ್ಣ ತಮ್ಮಂದಿರನ್ನು ಎತ್ತಿಕೊಂಡು ಸುರಂಗ ದ್ವಾರದಿಂದ ತಪ್ಪಿಸಿಕೊಂಡು ಹೊರಗೆ ಹೋದನು.

ಅರಗಿನ ಮನೆಯಲ್ಲಿ ಪಾಂಡವರು ಸುಟ್ಟು ಹೋದರೆಂದು ಹಸ್ತಿನಾವತಿಯಲ್ಲಿ ಶೋಕದ ಛಾಯೆ ಹಬ್ಬಿತು. ದುರ್ಯೋಧನನೂ ದುಃಖವನ್ನು ನಟಿಸಿದನು.

ಲಾಕ್ಷಾಗೃಹದಲ್ಲಿ ಪಾಂಡವರು ನಾಶವಾದರೆಂಬ ವಾರ್ತೆ ದ್ವಾರಕೆಗೂ ತಲುಪಿತು. ಕೃಷ್ಣನಿಗೆ ಸತ್ಯದ ಅರಿವಿದ್ದರೂ ಶೋಕವನ್ನು ಪ್ರದರ್ಶಿಸುತ್ತ ಬಂಧು ಕೃತ್ಯವನ್ನು ನೆರವೇರಿಸಲೆಂದು ಬಲರಾಮನ ಸಂಗಡ ಹಸ್ತಿನಾವತಿಗೆ ಹೋದನು. ಅಲ್ಲಿ ಭೀಷ್ಮ, ಕೃಪ, ವಿದುರ, ಗಾಂಧಾರಿ, ದ್ರೋಣ ಮೊದಲಾದವರನ್ನು ಕಂಡು "ಅಯ್ಯೊ, ಎಂತಹ ಅನರ್ಥ ನಡೆದು ಹೋಯಿತು" ಎಂದು ಅವರ ಮುಂದೆ ಮಮ್ಮಲ ಮರುಗಿದನು. ಇತ್ತ ರಾಮ, ಕೃಷ್ಣರು ದ್ವಾರಕೆಯಲ್ಲಿಲ್ಲದ ಸಂದರ್ಭದಲ್ಲಿ ಅಕ್ರೂರನೂ, ಕೃತವರ್ಮನೂ ಶತಧನ್ವನ ಹತ್ತಿರ ಹೋಗಿ, "ಸತ್ರಾಜಿತ ನಿನಗೆ ಮೋಸ ಮಾಡಿದ್ದಾನೆ. ಅವನಲ್ಲಿರುವ ಸ್ಯಮಂತಕಮಣಿಯನ್ನು ನೀನೇಕೆ ಕಿತ್ತುಕೊಳ್ಳಬಾರದು?" ಎಂದು ದುರ್ಬೋಧೆ ಮಾಡಿದರು. ಸತ್ರಾಜಿತನು ಶತಧನ್ವನಿಗೆ ತನ್ನ ಮಗಳಾದ ಸತ್ಯಭಾಮೆಯನ್ನು ಕೊಡುವುದಾಗಿ ಮಾತುಕೊಟ್ಟಿದ್ದನು. ಆದರೆ ಕೃಷ್ಣನ ಸ್ನೇಹ ಸಂಪಾದನೆಗಾಗಿ ಅವನಿಗೇ ಸತ್ಯಭಾಮೆಯನ್ನು ಧಾರೆಯೆರೆದು ಕೊಟ್ಟಿದ್ದನು. ಇದರಿಂದ ಅವಮಾನಿತರಾದ ಶತಧನ್ವನು ಸತ್ರಾಜಿತನ ಮೇಲೆ ಕಿಡಿಕಾರುತ್ತಲೇ ಇದ್ದನು. ಈಗ ಕೃಷ್ಣನ ಅನುಪಸ್ಥಿತಿಯಲ್ಲಿ ಸೇಡು ತೀರಿಸಿಕೊಳ್ಳಲು ನಿಶ್ಚಯಿಸಿ ಸತ್ರಾಜಿತನು ರಾತ್ರಿ ಮಲಗಿದ್ದಾಗ ಕೊಂದು ಸ್ಯಮಂತಕಮಣಿಯನ್ನು ತೆಗೆದುಕೊಂಡು ಹೋದನು. ಅಂತಃಪುರದ ಸ್ತ್ರೀಯರೂ, ಸತ್ಯಭಾಮೆಯೂ ಬಹುವಾಗಿ ವಿಲಪಿಸಿದರು. ಸತ್ಯಭಾಮೆಯು ತಂದೆಯ ಶವವನ್ನು ತೈಲದ್ರೋಣಿಯಲ್ಲಿರಿಸಿ ಹಸ್ತಿನಾವತಿಗೆ ಹೋಗಿ ನಡೆದ ಅನರ್ಥವನ್ನು ಕೃಷ್ಣನಿಗೆ ತಿಳಿಸಿ ಅತ್ತಳು. ಕೃಷ್ಣನೂ, ಬಲರಾಮನೂ ವೃತ್ತಾಂತವನ್ನು ಕೇಳಿ, "ಅಯ್ಯೋ ನಮಗೆಂತಹ ವಿಪತ್ತು ಬಂದೊದಗಿತು!" ಎಂದು ಕಣ್ಣೀರು ಹಾಕಿದರು. ವಾಸುದೇವನು ಸತ್ಯಭಾಮೆ, ರಾಮರ ಜೊತೆಯಲ್ಲಿ ದ್ವಾರಕೆಗೆ ಬಂದನು. ಶತಧನ್ವನನ್ನು ಕೊಂದು ಅವನಿಂದ ಸ್ಯಮಂತಕ ಮಣಿಯನ್ನು ಪಡೆಯುವ ಯೋಜನೆ ರೂಪಿಸಿದನು. ಇದನ್ನು ಕೇಳಿದ ಶತಧನ್ವನು ಭಯದಿಂದ ನಡುಗಿಬಿಟ್ಟನು. ಅವನು ಕೃತವರ್ಮನ ಸಹಾಯವನ್ನು ಕೇಳಿದನು. ಆದರೆ ಸರ್ವಶಕ್ತನಾದ ಶ್ರೀಕೃಷ್ಣನ ವಿರುದ್ಧ ಯಾವ ಕಾರ್ಯವನ್ನೂ ತಾನು ಮಾಡುವುದಿಲ್ಲವೆಂದು ಕೃತವರ್ಮನು ಶತಧನ್ವನ ಬೇಡಿಕೆಯನ್ನು ತಿರಸ್ಕರಿಸಿದನು. ಆಗ ಶತಧನ್ವನು ಅಕ್ರೂರನ ಒತ್ತಾಸೆಗೆ ದುಂಬಾಲು ಬಿದ್ದನು. ಅವನೂ ಜಗದೀಶ್ವರನೊಡನೆ ವೈರ ಕಟ್ಟಿಕೊಳ್ಳಲು ಒಪ್ಪಲಿಲ್ಲ. ಬೇರೆ ಗತಿಯಿಲ್ಲವೆಂದು ಮನಗಂಡ ಶತಧನ್ವನು ಮಣಿಯನ್ನು ಅಕ್ರೂರನಲ್ಲಿಯೇ ನ್ಯಾಸವಾಗಿಟ್ಟು ದಿನಕ್ಕೆ ನೂರು ಯೋಜನಗಳಷ್ಟು ದೂರ ಕ್ರಮಿಸಬಲ್ಲ ಕುದುರೆಯನ್ನೇರಿ ತನ್ನ ರಾಜ್ಯವನ್ನು ಬಿಟ್ಟು ಹೊರಟು ಹೋದನು. ರಾಮ, ಕೃಷ್ಣರೂ ಗರುಡಧ್ವಜವಿರುವ ತಮ್ಮ ರಥಕ್ಕೆ ಮಹಾವೇಗದ ಕುದುರೆಗಳನ್ನು ಕಟ್ಟಿ ಅದನ್ನೇರಿ ಸತ್ರಾಜಿತನನ್ನು ಕೊಂದ ಶತಧನ್ವನನ್ನು ಬೆನ್ನಟ್ಟಿದರು. ಮಿಥಿಲಾಪಟ್ಟಣದ ಉಪವನದಲ್ಲಿ ಶತಧನ್ವನ ಕುದುರೆ ದಣಿದು ಬಿದ್ದುಬಿಟ್ಟಿತು. ಅದನ್ನು ಅಲ್ಲೇ ಬಿಟ್ಟು ಶತಧನ್ವನು ಓಡತೊಡಗಿದನು. ಶ್ರೀಕೃಷ್ಣನೂ ಪದಾತಿಯಾಗಿ ಅವನ ಹಿಂದಿನಿಂದ ಓಡಿದನು. ಕೊನೆಗೆ ತನ್ನ ಚಕ್ರದಿಂದ ಶತಧನ್ವನ ತಲೆಯನ್ನು ಕತ್ತರಿಸಿ ಹಾಕಿ ಸ್ಯಮಂತಕ ಮಣಿಯನ್ನು ಹುಡುಕಿದನು. ಆದರೆ ಅದು ಸಿಗಲಿಲ್ಲ. ಆಗ ಅಣ್ಣನ ಬಳಿಗೆ ಹೋಗಿ ಕೃಷ್ಣನೆಂದನು, "ಅವನ ಹತ್ತಿರ ಮಣಿಯಿಲ್ಲ. ನಾವು ಸುಮ್ಮನೆ ಕೊಂದಂತಾಯಿತು".

(ಮುಂದುವರಿಯುವುದು)

## ಹೊಸ ಬೆಳಕು

**ನಲ್ನುಡಿ :**

**ಸ್ವಾಧ್ಯಾಯ-ಪ್ರವಚನೇ ಏವೇತಿ ನಾಕೋ ಮೌದ್ಗಲ್ಯಃ।**
**ತದ್ಧಿ ತಪಸ್ತದ್ಧಿ ತಪಃ।**

ಅಂದರೆ ಮೌದ್ಗಲ್ಯ ಮಹರ್ಷಿಗಳ ವಾಣಿ ಇದು : ಸ್ವಾಧ್ಯಾಯ-ಪ್ರವಚನಗಳನ್ನೇ ಅನುಷ್ಠಾನ ಮಾಡಬೇಕು. ಅದೇ ತಪಸ್ಸು, ಅದೇ ತಪಸ್ಸು!

**ಪುಸ್ತಕ ಪರಿಚಯ :**

**ತೃಪ್ತಿ**
*(ವಿಂಶತಿ ಸಮಾರಂಭದ ಸ್ಮರಣೆಯೊಂದಿಗೆ 1991-2011)*
*ಲೇಖಕರು : ವೈ.ಯಂ.ಶ್ರೀಧರ ರಾವ್*
*ಪ್ರಕಾಶನ : ವೇ। ಮೂ। ಹೆಚ್.ನಾರಾಯಣ ಭಟ್ ಸ್ಮಾರಕ ಟ್ರಸ್ಟ್ (ರಿ.), ಹಳೆಯಂಗಡಿ*
*ಮುದ್ರಕರು : ಪ್ರಕಾಶ್ ಪ್ರಿಂಟರ್ಸ್, ಮುಖ್ಯರಸ್ತೆ, ಪಡುಬಿದ್ರಿ.*

'ತೃಪ್ತಿ' ಈ ಕೃತಿಯ ಮುನ್ನುಡಿಯಲ್ಲಿ ಅನಂತ ಪದ್ಮನಾಭ ಶಾಸ್ತ್ರಿಯವರು ತಿಳಿಸುತಾರೆ : ಸಂಪಿಗೆ, ಕಾಡಿನಲ್ಲಿ ಅರಳಿದರೂ ಅದರ ಸುವಾಸನೆ ಕಾಡಿನಲ್ಲೇ ಅಡಗಿರಬಲ್ಲುದೇ? ಮಾತಿಗಿಂತ ಭಾವನೆ ಬಲವತ್ತರವಲ್ಲವೇ? ಕಾರ್ಯಕ್ರಮದಲ್ಲಿ ಶ್ರೀ ಹೆಚ್.ನಾರಾಯಣ ಭಟ್ ಇವರ ಶ್ರದ್ಧೆ ನಿರಪೇಕ್ಷತೆ, ದೊರೆತುದರಲ್ಲಿ ತೃಪ್ತಿ ಇವುಗಳಿಂದಾಗಿ ಸಮಾಜ ಅವರನ್ನು ಗೌರವದಿಂದ ಕಾಣುತಿತು. ತಮ್ಮಲ್ಲೇ ಇರಬೇಕೆಂದು ಒತ್ತಾಯಿಸುವ ಹಲವು ಮನೆಗಳಿದ್ದವು. ಅವರ ಸೇವಾ ಮನೋವೃತ್ತಿಗೆ ಅದು ಒಪ್ಪದು. ಅವರು ಒಂದು ಕೋಣೆಯನ್ನು ಬಾಡಿಗೆಗೆ ಪಡೆದು-ಅಲ್ಲಿ ವೇದ, ಪೌರೋಹಿತ್ಯ- ಸಂಸ್ಕೃತ ತರಗತಿಗಳನ್ನು ನಡೆಸುತ್ತಿದ್ದರು. ಅಲ್ಲಿ ಕಲಿತವರು-ಹೆಸರಾಂತ ಪುರೋಹಿತರೂ, ಕಾಲೇಜುಗಳಲ್ಲಿ ಪ್ರಾಧ್ಯಾಪಕರೂ ಆಗಿದ್ದಾರೆ. ಅವರು ಹೀಗೆ ಅನಾಸಕ್ತರಾಗಿಯೇ ತಮ್ಮ ಎಲ್ಲಾ ಹೊಣೆಗಳನ್ನು ನಿರ್ವಹಿಸಿ ಯಾವ ಕಾಮನೆ ಗಳನ್ನೂ ಇಟ್ಟುಕೊಳ್ಳದೆ, ಭಗವಂತನ ಪಾದ ಸೇರಿದರು.

ಈ ಕೃತಿಯ ಲೇಖಕರಾದ ಶ್ರೀ ವೈ.ಯಂ. ಶ್ರೀಧರ್ ರಾವ್ ಇವರ ಮೊದಲ ಮಾತು : "ಹೊಸಬೆಟ್ಟು ನಿವಾಸಿ, ಹೆಜಮಾಡಿ ಪ್ರಭಾಕರ ರಾಯರು ಹಳೆಯಂಗಡಿ ವೇ। ಮೂ। ನಾರಾಯಣ ಭಟ್-ಇವರ ಕುರಿತು ಒಂದು ಪುಸ್ತಕವನ್ನು ಬರೆಯುವಂತೆ ನನ್ನನ್ನು ಕೇಳಿ ಕೊಂಡಾಗ, ನಿರಾಕರಿಸಲಾಗದೆ, ಒಪ್ಪಿಕೊಳ್ಳಲೇಬೇಕಾಯಿತು. ಎಲ್ಲೂರು ಕಾಶೀ ಸಂತಾನದ ಸಂಕ್ಷಿಪ್ತ ಪರಿಚಯದ ಪ್ರಥಮ ಮುದ್ರಣವನ್ನು 1980ರಲ್ಲಿಯೂ, ದ್ವಿತೀಯ ಮುದ್ರಣವನ್ನು 1990ರಲ್ಲಿಯೂ ಇತರ ಐದಾರು ಮಂದಿಯ ಕುರಿತು ಒಂದೊಂದು ಪುಸಕವನ್ನು ಬರೆದಿದ್ದ ನಾನು-ನನ್ನ ಮನೆಯ ಪುರೋಹಿತರೂ ಆದ ಶ್ರೀಮಾನ್ ನಾರಾಯಣ ಭಟ್-ಇವರ ಕುರಿತು ಪುಸಕವನ್ನು ಬರೆಯುವುದು ಅಭಿಮಾನದ ಸಂಗತಿ ಎಂದು ಒಪ್ಪಿಕೊಂಡಂತೆ, ದಿ। ವೇದಮೂರ್ತಿ ಹೆಚ್.ನಾರಾಯಣ ಭಟ್ (ರಿ.) ಹಳೆಯಂಗಡಿ-ಇದು 20 ವರ್ಷಗಳನ್ನು ಪೂರೈಸಿಕೊಂಡು ವಿಂಶತಿ ಸಮಾರಂಭವನ್ನು ಆಚರಿಸುವ ಸುಸಂದರ್ಭದಂದೇ ಈ ಕೃತಿಯ ಬಿಡುಗಡೆಯಾಗಬೇಕೆಂಬ ಇರಾದೆಯಿಂದ ಕಾರ್ಯಪ್ರವೃತ್ತನಾದೆನು.

ಈ ಕೃತಿಯ ಪ್ರಥಮ ಭಾಗದಲ್ಲಿ ಶ್ರೀಮಾನ್ ನಾರಾಯಣ ಭಟ್-ಇವರ ಹ್ಯೊಗೆ ಗುಡ್ಡೆ ವಂಶ ಪಾರಂಪರ್ಯದ ಸವಿವರ ಸಾಧ್ಯವಾದಷ್ಟು ಮಟ್ಟಿಗೆ ಸಂಗ್ರಹಿಸಿ, ಹಿಂದಿನ ಹಿರಿಯ ತಲೆಮಾರಿನವರ ಬಗ್ಗೆ ಸ್ವಲ್ಪವಾದರೂ ಇಂದಿನ ತಲೆಮಾರಿನವರಿಗೂ ತಿಳಿಯುವಂತಾಗಲಿ ಎಂಬ ಭಾವನೆಯಿಂದ 7 ತಲೆಮಾರಿನವರ ಸೂಕ್ಷ್ಮ ಪರಿಚಯವನ್ನೂ ಕುಟುಂಬದ ಕೆಲವು ಆಢ್ಯ ಮಹನೀಯರ ಕುರಿತು ಲಘು ಟಿಪ್ಪಣಿಯನ್ನೂ ಶ್ರೀಮಾನ್ ಭಟ್ರ ಒಡನಾಡಿಗಳಿಂದ ಶ್ರೀಯುತರ ಬಗ್ಗೆ ಅವರವರ ಸದಭಿಪ್ರಾಯಗಳನ್ನೂ ಸೇರಿಸಿ ಕೊಳ್ಳಲಾಗಿದೆ. ದ್ವಿತೀಯ ಭಾಗದಲ್ಲಿ ಶ್ರೀಯುತರ ಸ್ಮಾರಕ ಟ್ರಸ್ಟ್‌ನ 20 ಸಂವತರಗಳ ಬೆಳವಣಿಗೆ, ಆಚರಣೆಯ ಕುರಿತು ವಿವರಗಳನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿದೆ."

ಈ ಕೃತಿಯಲ್ಲಿ ದಿ। ಭಟ್ರ ಬಗ್ಗೆ ಶ್ರೀಯುತರ ಆಪ್ತ ಅಭಿಮಾನಿಗಳಾದ ಸತ್ಯಶಂಕರ ಬೊಳ್ಳಾವ, ಕೋಟೆಕಾರು; ಬಿ. ಭವಾನಿಶಂಕರ್‌ರಾವ್, ಬೆಂಗಳೂರು; ಡಾ। ಪಿ. ವಿಠಲ ರಾವ್, ಧಾರವಾಡ; ಹೆಜಮಾಡಿ ಪ್ರಭಾಕರ ರಾವ್, ಹೊಸಬೆಟ್ಟು; ಡಾ। ಐ. ಸಂತೋಷ್‌ಕುಮಾರ್ ಶಾಸ್ತ್ರಿ, ಬಲ್ಮಠ, ಮಂಗಳೂರು; ಯಂ.ರಘುರಾಮ ಶರ್ಮ, ಕಂಕನಾಡಿ, ಮಂಗಳೂರು; ಡಾ। ಯಾಜಿ ನಿರಂಜನ ಭಟ್, ಉಡುಪಿ; ವಸಂತಕುಮಾರ್, ಪಾತಾಳಿ ಮನೆ, ಹೆಜಮಾಡಿ; ವೈ.ಯಸ್. ಸುರೇಂದ್ರ, ಬೆಂಗಳೂರು ಇವರ ಸದಭಿಪ್ರಾಯಗಳು ಇವೆ.

ಎಚ್.ನಾರಾಯಣ ಭಟ್ ಅವರು ತಮ್ಮ ವೃತ್ತಿಯನ್ನು ಎಷ್ಟು ಶ್ರದ್ಧೆಯಿಂದ ನೆರವೇರಿಸುತ್ತಿದ್ದರು ಎಂದರೆ ಸತ್ಯಾಃ ಸಂತು ಯಜಮಾನಸ್ಯ ಕಾಮಾಃ। (ಯಜಮಾನನ ಕನಸುಗಳು ನನಸಾಗಲಿ) ಎನ್ನುವ ಅವರ ಹೃದಯದಾಳದಿಂದ ಹೊರ ಹೊಮ್ಮಿದ ಹರಕೆ ಫಲಿಸುತ್ತಿತ್ತು ಎಂದು ಮುನ್ನುಡಿಯಲ್ಲಿ ತಿಳಿಸಿದನ್ನು ಗಮನಿಸಿದಾಗ ನಮಗೆ ನಿಜವಾಗಿಯೂ ಅವರ ಬಗ್ಗೆ ಪ್ರೀತ್ಯಾದರ ಮೂಡುತ್ತದೆ.

– ವೈ. ಮೋಹನ ರಾವ್.

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ.

# ಜಗದ್ಗುರುಗಳವರ ಚಾತುರ್ಮಾಸ್ಯ ವ್ರತ



- ಡಾ। ಎಚ್.ವಿ.ನರಸಿಂಹಮೂರ್ತಿ,
ವಿಶ್ರಾಂತ ಪ್ರಾಧ್ಯಾಪಕರು
ಕುಂದಾಪುರ-576 201.

ಡಾ। ಎಚ್.ವಿ.ನರಸಿಂಹಮೂರ್ತಿಯವರು ಕುಂದಾಪುರದ ಭಂಡಾರ್‌ಕಾರ್ಸ್ ಕಾಲೇಜಿನ ವಿಶ್ರಾಂತ ಸಂಸ್ಕೃತ ಪ್ರಾಧ್ಯಾಪಕರು ಹಾಗೂ ಶ್ರೀ ಶೃಂಗೇರಿ ಮಠದ ಧರ್ಮಾಧಿಕಾರಿಗಳೂ ಆಗಿದ್ದಾರೆ. ತಮ್ಮ ಇತರ ಅನೇಕ ರಚನಾತ್ಮಕ ಚಟುವಟಿಕೆಗಳ ಜತೆಗೆ ಕುಂದಾಪುರದ ಶ್ರೀ ಕುಂದೇಶ್ವರ ದೇವಸ್ಥಾನದ ಆಡಳಿತ ಧರ್ಮದರ್ಶಿಗಳಾಗಿ ಅದಕ್ಕೆ ಹೊಸ ಆಯಾಮ ನೀಡಿದ್ದಾರೆ. ಅಲ್ಲಿ ಜಗದ್ಗುರುಗಳವರ ಪೂರ್ಣಾನುಗ್ರಹದೊಂದಿಗೆ ''ಶ್ರೀ ಭಾರತೀ ತೀರ್ಥ ಕೃಪಾ'' ಎಂಬ ಅತ್ಯುತ್ತಮ ಕಟ್ಟಡ ಸಮುಚ್ಚಯವನ್ನು ನಿರ್ಮಿಸಿದ್ದಾರೆ. ಅವರ ಇತ್ತೀಚೆಗಿನ ಒಂದು ಮಹತ್ವದ ಕೃತಿ-'ಶೃಂಗೇರಿ ಶ್ರೀಶಾರದಾ ಪೀಠ'. ಈ ಪತ್ರಿಕೆಯಲ್ಲಿ ಅವರ ಲೇಖನ ''ಶೃಂಗೇರಿ ಜಗದ್ಗುರು ಮಹಾಸಂಸ್ಥಾನ ಮತ್ತು ಅವಿಭಕ್ತ ದಕ್ಷಿಣ ಕನ್ನಡ ಜಿಲ್ಲೆಯ ಸಂಬಂಧ'' ಧಾರಾವಾಹಿಯಾಗಿ ಪ್ರಕಟವಾಗಿದೆ. ಇದೀಗ ಶೃಂಗೇರಿ ಜಗದ್ಗುರುಗಳವರ ಚಾತುರ್ಮಾಸ್ಯ ವ್ರತದ ಕುರಿತು ಅವರು ಕಳುಹಿಸಿದ ಲೇಖನ ಪ್ರಕಟವಾಗುತ್ತಿದೆ. ನಮ್ಮ ಶ್ರೀಶಾರದಾ ಪತ್ರಿಕೆಯನ್ನು ಅವರು ಸರ್ವರೀತಿಯಲ್ಲೂ ಪ್ರೋತ್ಸಾಹಿಸಿ ಹರಸಿದ್ದಾರೆ. ಡಾ। ಎಚ್.ವಿ.ನರಸಿಂಹಮೂರ್ತಿಯವರಿಗೆ ಹೃತ್ಪೂರ್ವಕವಾದ ಕೃತಜ್ಞತೆಗಳು. -ಸಂಪಾದಕ ಮಂಡಳಿ


'ಚಾತುರ್ಮಾಸ್ಯ' ಎಂಬ ಶಬ್ದವೇ ಸೂಚಿಸುವಂತೆ ನಾಲ್ಕು ತಿಂಗಳ ವ್ರತ ಎಂಬುದು ಇದರ ಸಾಮಾನ್ಯಾರ್ಥ. ಆದರೆ 'ಪಕ್ಷೋ ವೈ ಮಾಸಃ' ಎಂಬ ಶ್ರುತಿವಾಕ್ಯಕ್ಕನುಗುಣವಾಗಿ ಒಂದು ಪಕ್ಷವನ್ನೇ ಒಂದು ತಿಂಗಳೆಂದು ಭಾವಿಸಿದಾಗ ಇದು ನಾಲ್ಕು ಪಕ್ಷಗಳೆಂಬ ಅರ್ಥವನ್ನು ಕೊಡುತ್ತದೆ. ಯತಿಗಳು ಪರಿವ್ರಾಜಕರು; ಅವರು ಸ್ವಧರ್ಮದಂತೆ ದೇಶ ಸಂಚಾರ ಮಾಡುತ್ತಿರುತ್ತಾರೆ. ಆದರೆ ಮಳೆಗಾಲದಲ್ಲಿ ಅವರು ಸಂಚಾರ ಮಾಡಬಾರದು. ಇದಕ್ಕೆ ಕಾರಣ ಅಹಿಂಸೆಯ ಪರಿಪಾಲನೆ. ಆಷಾಢದ ಮಳೆಗೆ ಎಲ್ಲೆಲ್ಲೂ ಕ್ರಿಮಿ-ಕೀಟಗಳು ಹುಟ್ಟಿಕೊಂಡಿರುತ್ತವೆ. ಕೃಷಿಕರು ಬಿತ್ತನೆ ಆರಂಭಿಸಿರುತ್ತಾರೆ. ಅನೇಕ ಬಗೆಯ ಸಸ್ಯಗಳು ಮೊಳಕೆಯೊಡೆದು, ಭೂಮಿಯನ್ನು ಭೇದಿಸಿ ಹುಟ್ಟಿಕೊಳ್ಳುತ್ತವೆ. ನಿರಂತರ ಮಳೆಯಿಂದಾಗಿ ಭೂಮಿಯೂ ಮೆದುವಾಗುತ್ತದೆ. ಹಾಗಾಗಿ ಆಗ ಸಂಚರಿಸಿದರೆ ತಿಳಿದೋ, ತಿಳಿಯದೆಯೋ ಹಿಂಸೆ ಮಾಡಿದಂತಾಗುತ್ತದೆ. ಅಹಿಂಸೆ ಸಂನ್ಯಾಸಾಶ್ರಮಿಯ ಪ್ರಮುಖ ವ್ರತ. ಚಾತುರ್ಮಾಸ್ಯ ಸಂಕಲ್ಪದಲ್ಲಿ ಹೇಳುವಂತೆ 'ಸಾಮಾನ್ಯವಾಗಿ ಮಳೆಗಾಲದಲ್ಲಿ ದಾರಿ ಅನೇಕ ಸೂಕ್ಷ್ಮ ಜೀವಿಗಳಿಂದ ತುಂಬಿರುತ್ತದೆ. ಅವುಗಳಿಗೆ ಹಿಂಸೆ ಮಾಡಬಾರದಾದ್ದರಿಂದ ಶ್ರುತಿ ಸಮ್ಮತವಾದ ನಾಲ್ಕು ಪಕ್ಷಗಳ ಕಾಲ ಒಂದೇ ಸ್ಥಳದಲ್ಲಿ ಇರುತ್ತೇವೆ' (ಪ್ರಾಯೇಣ ಪ್ರಾವೃಷಿಪ್ರಾಣಿ ಸಂಕುಲಂ ವರ್ತ್ಮ ದೃಶ್ಯತೇ। ಅತಸ್ತೇಷಾಂ ಅಹಿಂಸಾರ್ಥಃ ಪಕ್ಷಾನ್ ವೈ ಶ್ರುತಿ ಸಂಶ್ರಯಾನ್, ಸ್ಥಾಸ್ಯಾಮಶ್ಚತುರೋ ಮಾಸಾನ್...॥) ಎಂದು ಈ ವ್ರತವನ್ನು ಆರಂಭಿಸಲು ಸಂಕಲ್ಪಿಸುತ್ತಾರೆ. ಆದ್ದರಿಂದ ಯತಿಗಳು ಪಾಲಿಸಬೇಕಾದ ಅಹಿಂಸಾಧರ್ಮವೇ ಚಾತುರ್ಮಾಸ್ಯ ವ್ರತಕ್ಕೆ ಮೂಲಕಾರಣ.

ಚಾತುರ್ಮಾಸ್ಯವ್ರತಕ್ಕೆ ಇನ್ನೊಂದು ಕಾರಣವೂ ಇದೆ. ಸ್ಥಿತಿಕರ್ತನಾದ ಮಹಾವಿಷ್ಣುವು ಆಷಾಢ ಮಾಸದಿಂದ ಕಾರ್ತಿಕ ಮಾಸದ ವರೆಗೆ ಅಂತರ್ಮುಖಿಯಾಗಿ ದಿವ್ಯ ನಿದ್ರೆಯಲ್ಲಿ ಮಗ್ನನಾಗಿರುತ್ತಾನೆ. ಆ ಸಮಯದಲ್ಲಿ ಯತಿಗಳಾದವರು ಅಂತರ್ಮುಖಿಗಳಾಗಿ ತಮ್ಮ ಸಾಧನೆಯಲ್ಲಿ ಹೆಚ್ಚು ತೊಡಗಬೇಕು. ಹಾಗೆ ಮಾಡಿದಾಗ ಸಮಾಜ ಹಸನಾಗಲು ಸಾಧ್ಯ. ಸಾತ್ತ್ವಿಕ ಶಕ್ತಿಯ ಸಂಚಾರ ಎಲ್ಲೆಡೆ ಆಗಲು ಸಾಧ್ಯ.

**ವ್ಯಾಸಪೂರ್ಣಿಮಾ :**

ಪುಣ್ಯಪ್ರದವಾದ ಆಷಾಢ ಶುದ್ಧ ಹುಣ್ಣಿಮೆಯನ್ನು 'ವ್ಯಾಸ ಪೂರ್ಣಿಮಾ' ಅಥವಾ 'ಗುರು ಪೂರ್ಣಿಮಾ' ಎಂದು ಕರೆಯುತ್ತಾರೆ. ಏಕೆಂದರೆ ಬ್ರಹ್ಮವಿದ್ಯೆಯನ್ನು ಉಪದೇಶಿಸಿದ ಗುರುಪರಂಪರೆಯಲ್ಲಿ ಭಗವಾನ್ ವೇದವ್ಯಾಸರು ಅಗ್ರಗಣ್ಯರು. 'ವೇದಾನ್ ವಿವ್ಯಾಸ ಯಸ್ಮಾತ್ ಸಃ ವೇದ ವ್ಯಾಸ ಇತೀರಿತಃ' ಎಂಬಂತೆ ಅನಂತವಾದ ವೇದವನ್ನು ನಾಲ್ಕು ವಿಭಾಗಗಳನ್ನಾಗಿ ವಿಭಾಗಿಸಿದ್ದರಿಂದಲೇ ಅವರನ್ನು 'ವೇದವ್ಯಾಸ' ಎಂದು ಕರೆಯಲಾಗುತ್ತದೆ. ಪಂಚಮವೇದವೆಂದೇ ಪ್ರಸಿದ್ಧವಾದ ಮಹಾಭಾರತ, ಅಷ್ಟಾದಶ ಪುರಾಣಗಳು, ಪ್ರಸ್ಥಾನತ್ರಯಗಳಲ್ಲಿ ಒಂದಾದ ಬ್ರಹ್ಮಸೂತ್ರ ಇವುಗಳನ್ನೆಲ್ಲ ರಚಿಸಿದವರು ಅವರು. ಆದ್ದರಿಂದ ಗುರು ಪೂರ್ಣಿಮೆಯಂದು ಪವಿತ್ರಭಾರತದ ಎಲ್ಲ ಸಂಪ್ರದಾಯಗಳ ಯತಿಪರಂಪರೆಯವರೂ ಅವರನ್ನು ವಿಶೇಷವಾಗಿ ಪೂಜಿಸುತ್ತಾರೆ.

ಚಾತುರ್ಮಾಸ್ಯ ವ್ರತವು ಆರಂಭವಾಗುವುದು ಈ ಗುರುಪೂರ್ಣಿಮೆಯಂದು. ವ್ರತನಿರತರಾದ ಯತಿಗಳು ಈ ಕಾಲದಲ್ಲಿ ತಮ್ಮ ಸಾಧನೆ-ತಪಸ್ಸುಗಳ ನೆಲಗಟ್ಟನ್ನು ಭದ್ರಗೊಳಿಸಲು ಅಧ್ಯಯನ-ಅಧ್ಯಾಪನಗಳ ಮೂಲಕ, ಯಮ-ನಿಯಮಾದಿ ಯೋಗ ಸಾಧನೆಗಳ ಮುಖಾಂತರ ಮತ್ತು ಶಾಸ್ತ್ರೋಕ್ತ ವ್ರತೋಪವಾಸಗಳಿಂದ ಚಂಚಲವಾದ ಮನಸ್ಸನ್ನು ನಿರ್ದಿಷ್ಟ ಸಾಧನೆಯತ್ತ ಒಯ್ಯುವ ಪ್ರಯತ್ನದಲ್ಲಿ ನಿರತರಾಗುತ್ತಾರೆ. ಸರಳ ಜೀವನ-ಉನ್ನತ ಚಿಂತನ ಅವರದಾಗಿರುತ್ತದೆ. ಅಧ್ಯಯನ-ಅಧ್ಯಾಪನ ಮತ್ತು ಅನುಷ್ಠಾನಗಳತ್ತ ತಮ್ಮ ಗಮನವನ್ನು ವಿಶೇಷವಾಗಿ ಹರಿಸುತ್ತಾರೆ.



**ಜಗದ್ಗುರುಗಳವರ ಚಾತುರ್ಮಾಸ್ಯ ವ್ರತ :**

ದಕ್ಷಿಣಾಮ್ನಾಯ ಶೃಂಗೇರಿ ಶ್ರೀಶಾರದಾ ಪೀಠದ ಜಗದ್ಗುರುಗಳವರು ಚಾತುರ್ಮಾಸ್ಯ ವ್ರತದ ಪ್ರಕ್ರಿಯೆಗಳನ್ನು ಆರಂಭಿಸುವ ಮೊದಲು ಆಷಾಢ ಮಾಸದ ಶುಕ್ಲ ಪಕ್ಷದ ಪ್ರದೋಷ ದಿನದಂದು ಪೂರ್ವ ಸಂಪ್ರದಾಯದಂತೆ ಸಂಜೆ ಹೊತ್ತು ಮಲ್ಲಿಕಾರ್ಜುನ ಬೆಟ್ಟಕ್ಕೆ ವೇದಘೋಷದೊಂದಿಗೆ ತೆರಳಿ ಶ್ರೀಮಲಹಾನಿಕರೇಶ್ವರ ಸ್ವಾಮಿಯ ದರ್ಶನ ಮಾಡುತ್ತಾರೆ. ವ್ಯಾಸ ಪೂರ್ಣಿಮೆಯಂದು ಬೆಳಗ್ಗೆ ಶ್ರೀಮಠದ ಆವರಣದಲ್ಲಿರುವ ಎಲ್ಲ ದೇವಾಲಯಗಳಿಗೂ ಚಿತ್ತೈಸಿ, ದೇವರ ದರ್ಶನ ಮಾಡಿದ ನಂತರ ಪೂಜಾಭವನದ ಕಡೆಗೆ ಆಗಮಿಸುತ್ತಾರೆ. ಅಷ್ಟು ಹೊತ್ತಿಗಾಗಲೇ ಸಹಸ್ರಾರು ಮಂದಿ ಭಕ್ತರು ಈ ಪೂಜಾ ಮಂದಿರದಲ್ಲಿ ದಟ್ಟೈಸಿರುತ್ತಾರೆ. ಈ ಮಂದಿರದಲ್ಲಿನ ವ್ಯಾಸಮಂಟಪವನ್ನು ವಿಶೇಷವಾಗಿ ಅಲಂಕರಿಸಿರುತ್ತಾರೆ. ಸೇರಿದ ಭಕ್ತರೆಲ್ಲ ಮೈಯೆಲ್ಲ ಕಣ್ಣಾಗಿ ಶ್ರೀ ಶ್ರೀಗಳವರ ಆಗಮನ ಮತ್ತು ಪೂಜಾ ವಿಧಿವಿಧಾನಗಳನ್ನು ವೀಕ್ಷಿಸಲು ಸಜ್ಜಾಗಿರುತ್ತಾರೆ.

ಜಗದ್ಗುರುಗಳವರು ಮಾಡುವ ಈ ಪೂಜೆಯಲ್ಲಿ ಮೂರು ಗುಂಪುಗಳ ಗುರುಪರಂಪರೆಗೆ ಪ್ರಾಧಾನ್ಯ. ಒಂದೊಂದು ಗುಂಪಿನಲ್ಲಿ ಐವರು ಆಚಾರ್ಯರು; ಈ ಗುಂಪುಗಳಿಗೆ ಕೃಷ್ಣಪಂಚಕ, ವ್ಯಾಸಪಂಚಕ ಮತ್ತು ಶಂಕರಾಚಾರ್ಯ ಪಂಚಕ ಎಂದು ಹೆಸರು. ಶ್ರೀಕೃಷ್ಣ, ಸನಕ, ಸನಂದನ, ಸನತ್ಕುಮಾರ, ಸನತ್ಸುಜಾತ ಮತ್ತು ಸುಮಂತ ಮಹರ್ಷಿಗಳು-ಇವರು ಕೃಷ್ಣಪಂಚಕದಲ್ಲಿ ಸೇರುತ್ತಾರೆ. ವ್ಯಾಸ ಪಂಚಕದಲ್ಲಿ ಶ್ರೀ ವೇದವ್ಯಾಸರು, ಜೈಮಿನಿ ಮಹರ್ಷಿ, ತೈಲ ಮಹರ್ಷಿ, ವೈಶಂಪಾಯನ ಮಹರ್ಷಿ ಮತ್ತು ಸುಮಂತ ಮಹರ್ಷಿಗಳನ್ನೂ, ಆಚಾರ್ಯ ಪಂಚಕದಲ್ಲಿ ಶ್ರೀ ಶಂಕರಾಚಾರ್ಯರು ಮತ್ತು ಅವರ ಶಿಷ್ಯರಾದ ಸುರೇಶ್ವರಾಚಾರ್ಯ, ಹಸ್ತಾಮಲಕಾಚಾರ್ಯ, ತೋಟಕಾಚಾರ್ಯ ಮತ್ತು ಪದ್ಮಪಾದಾಚಾರ್ಯರನ್ನು ಪೂಜಿಸಲಾಗುತ್ತದೆ. ಶೃಂಗೇರಿ ಶ್ರೀಮಠದ ಪರಂಪರಾಗತ ಸಂಪ್ರದಾಯದಂತೆ ಶ್ರೀಶ್ರೀಗಳವರು ಈ ಮೂರು ಪಂಚಕಗಳಿಗೂ ಪ್ರತ್ಯೇಕವಾಗಿ ಪೂಜೆಗಳನ್ನು ಸಲ್ಲಿಸುತ್ತಾರೆ. ಈ ಪೂಜೆಯ ನಂತರ ಅವರು ಶೃಂಗೇರಿ ಜಗದ್ಗುರು ಪರಂಪರಾ ಸ್ತೋತ್ರವನ್ನು ಪಠಿಸುತ್ತಾ, ಗುರುಪರಂಪರೆಯ ಎಲ್ಲ ಯತಿಗಳನ್ನು ಪೂಜಿಸುತ್ತಾರೆ.

ಈ ಗುರುಪರಂಪರೆಯು ಪ್ರಾರಂಭವಾಗುವುದು ಸದಾಶಿವನಿಂದ. ನಂತರ ಶ್ರೀ ಮಹಾವಿಷ್ಣು, ಶ್ರೀ ಚತುರ್ಮುಖ ಬ್ರಹ್ಮ, ಶ್ರೀ ವಸಿಷ್ಠ ಮಹರ್ಷಿ, ಶ್ರೀ ಶಕ್ತಿ ಮಹರ್ಷಿ, ಶ್ರೀ ಪರಾಶರ ಮಹರ್ಷಿ, ಶ್ರೀ ವೇದವ್ಯಾಸ ಮಹರ್ಷಿ, ಶ್ರೀ ಶುಕ ಮಹರ್ಷಿ, ಶ್ರೀ ಗೌಡಪಾದಾಚಾರ್ಯರು, ಶ್ರೀ ಗೋವಿಂದ ಭಗವತ್ಪಾದಾಚಾರ್ಯರು ಮತ್ತು ಶ್ರೀ ಆದಿ ಶಂಕರಾಚಾರ್ಯರ ನಂತರ ಶೃಂಗೇರಿ ಶ್ರೀ ಶಾರದಾ ಪೀಠದ ಮೊದಲ ಗುರುಗಳಾದ ಶ್ರೀ ಸುರೇಶ್ವರಾಚಾರ್ಯರಿಂದ ಮೊದಲ್ಗೊಂಡು ನಿಕಟಪೂರ್ವ ಗುರುಗಳಾದ ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರೆಗೆ ಮುವತ್ತೈದು ಮಂದಿ ಯತಿವರೇಣ್ಯರಿಗೆ ಪ್ರಸ್ತುತ ಪೀಠಾಧಿಪತಿಗಳಾಗಿರುವ ಶ್ರೀ ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳವರು ಪೂಜೆ ಸಲ್ಲಿಸುತ್ತಾರೆ.

ಈ ವ್ಯಾಸ ಪೂಜಾ ವಿಧಿ ಮುಗಿದ ನಂತರ ಶ್ರೀ ಶ್ರೀ ಗಳವರು ಹಿಂದೆ ಹೇಳಲಾದಂತೆ ಪರಿವ್ರಾಜಕರಾದ ತಾವು ನಾಲ್ಕು ತಿಂಗಳ ಕಾಲ ಒಂದೇ ಸ್ಥಳದಲ್ಲಿ ಇರಲು ಕಾರಣ ತಿಳಿಸಿ, 'ನಾವು ಇಲ್ಲಿ ಇದ್ದು ವ್ರತ ಕೈಗೊಳ್ಳುತ್ತೇವೆ' ಎಂದು ಸಂಕಲ್ಪ ಮಾಡುತ್ತಾರೆ. ಆಗ ಶ್ರೀಮಠದ ಶಿಷ್ಯರು 'ಗುರುಗಳು ಸುಖವಾಗಿ ಇಲ್ಲಿ ವಾಸ ಮಾಡಬೇಕು. ಇದರಿಂದ ನಾವೆಲ್ಲರೂ ಕೃತಾರ್ಥರಾಗುತ್ತೇವೆ. ಚಾತುರ್ಮಾಸ್ಯದ ಅವಧಿಯಲ್ಲಿ ನಾವೆಲ್ಲರೂ ಯಥಾಶಕ್ತಿ ಗುರುಸೇವೆ ಮಾಡುತ್ತೇವೆ-(ನಿವಸಂತು ಸುಖೇನಾತ್ರ ಗಮಿಷ್ಯಾಮಃ ಕೃತಾರ್ಥತಾಮ್। ಯಥಾಲಿಹಿತಶುಶ್ರೂಷಾಂ ಕರಿಷ್ಯಾಯೋ ವಯಂ ಮುದಾ'') - ಎಂದು ಧನ್ಯತಾ ಭಾವದಿಂದ ವಿನಂತಿಸಿಕೊಳ್ಳುತ್ತಾರೆ.

ಸಂಕಲ್ಪದ ನಂತರ ಶ್ರೀ ಶ್ರೀಗಳವರ ಪಾದುಕೆಗಳಿಗೆ ಶ್ರೀಮಠದ ಪುರೋಹಿತರು ಪೂಜೆ ಸಲ್ಲಿಸುತ್ತಾರೆ. ಶೃಂಗಪುರ, ಸಚ್ಚಿದಾನಂದಪುರ, ನರಸಿಂಹಪುರ ಮತ್ತು ವಿದ್ಯಾರಣ್ಯಪುರದ ಮಹಾಜನರು ಶ್ರೀ ಶ್ರೀ ಗಳವರಿಗೆ ಕಾಣಿಕೆಯನ್ನು ಸಮರ್ಪಿಸುತ್ತಾರೆ. ಆಡಳಿತಾಧಿಕಾರಿಗಳು ಶ್ರೀಮಠಕ್ಕೆ ದತ್ತಿ-ಕಾಣಿಕೆಗಳನ್ನು ನೀಡಿದ ಮಹಾರಾಜರ ಹೆಸರಿನಲ್ಲಿ ಶ್ರೀ ಶ್ರೀ ಗಳವರಿಗೆ ಕಾಣಿಕೆ ಸಮರ್ಪಿಸಿ, ಸಾಷ್ಟಾಂಗ ಪ್ರಣಾಮ ಸಲ್ಲಿಸುತ್ತಾರೆ. ಇದಾದ ನಂತರ ಶ್ರೀ ಶ್ರೀಗಳವರು ನೆರೆದ ಶಿಷ್ಯರೆಲ್ಲರಿಗೂ ತೀರ್ಥ ನೀಡುತ್ತಾರೆ. ಶ್ರೀಮಠೀಯ ಯಾಗ ಶಾಲೆಯಲ್ಲಿ ಶ್ರೀಲಲಿತಾ ಹೋಮ, ಶಾರದಮ್ಮನವರ ಸನ್ನಿಧಿಯಲ್ಲಿ ಲಕ್ಷ ಮಲ್ಲಿಕಾರ್ಚನೆಯ ಉದ್ಯಾಪನೆ ನಡೆಯುತ್ತದೆ. ಮರುದಿನ ಪುನಃ ಶ್ರೀ ಶ್ರೀ ಗಳವರಿಂದ ಗುರುಪರಂಪರೆಗೆ ಪೂಜೆ ನಡೆಯುತ್ತದೆ. ನಂತರ ಎಲ್ಲರಿಗೂ ಪ್ರಸಾದ ಮತ್ತು ವ್ಯಾಸಾಕ್ಷತೆಯನ್ನು ಅನುಗ್ರಹಿಸುತ್ತಾರೆ.

ಚಾತುರ್ಮಾಸ್ಯದ ಅವಧಿಯ ಪ್ರತಿ ಶ್ರಾವಣ ಸೋಮವಾರ ಮಧ್ಯಾಹ್ನ ಜಗದ್ಗುರುಗಳವರು ತಮ್ಮ ಆರಾಧ್ಯ ದೇವರಾದ ಶ್ರೀ ಚಂದ್ರಮೌಳೀಶ್ವರ ಸ್ವಾಮಿಗೆ ವಿಶೇಷ ಪೂಜೆ ನೆರವೇರಿಸುತ್ತಾರೆ. ಶ್ರೀಮಠದ ಪಂಚಾಂಗದಲ್ಲಿ ಸೂಚಿಸಲಾದ ದಿನಗಳಂದು ಶ್ರೀಕೃಷ್ಣ ಜನ್ಮಾಷ್ಟಮಿ, ಸ್ವರ್ಣಗೌರಿ, ವಿನಾಯಕ ಚತುರ್ಥಿ, ಕೇದಾರ ನವಮಿ, ವಾಮನ ಜಯಂತಿ, ಅನಂತಪದ್ಮನಾಭ ವ್ರತ, ಉಮಾ ಮಹೇಶ್ವರ ವ್ರತ ಮೊದಲಾದವುಗಳನ್ನು ನಡೆಸುವುದಲ್ಲದೆ ಭಾದ್ರಪದ ಚತುರ್ಥಿಯಿಂದ ಪೂರ್ಣಿಮಾ ಪರ್ಯಂತ ಶ್ರೀ ಜಗದ್ಗುರುಗಳವರ ದಿವ್ಯ ಅಧ್ಯಕ್ಷತೆಯಲ್ಲಿ ಸಮಗ್ರ ಭಾರತದಲ್ಲೇ ಅದ್ವಿತೀಯವೆನ್ನಬಹುದಾದ ಶ್ರೀ ಮಹಾಗಣಪತಿ ವಾಕ್ಯಾರ್ಥವಿದ್ವತ್ಸಭೆಯು ನಡೆಯುತ್ತದೆ. ಶ್ರೀ ಮಠದ ಪರಂಪರಾಗತ ಶಿಷ್ಯರು ಸಾಮೂಹಿಕವಾಗಿ ಬಂದು ಚಾತುರ್ಮಾಸ್ಯ ನಿರತರಾದ ಗುರುಗಳವರ ದರ್ಶನ ಪಡೆದು ಪಾದಪೂಜೆ, ಭಿಕ್ಷಾವಂದನೆ ಮೊದಲಾದ ಸೇವೆಗಳನ್ನು ಸಲ್ಲಿಸಿ ಗುರುಗಳವರಿಂದ ಆಶೀರ್ವಾದ ಪಡೆಯುತ್ತಾರೆ. ಇಷ್ಟೊಂದು ಅರ್ಥಪೂರ್ಣವಾದ ಚಾತುರ್ಮಾಸ್ಯವ್ರತವು ಭಾದ್ರಪದ ಹುಣ್ಣಿಮೆಯಂದು ಸೀಮೋಲ್ಲಂಘನದೊಂದಿಗೆ ಮುಕ್ತಾಯಗೊಳ್ಳುತ್ತದೆ.

ಪೂರ್ವಪರಂಪರೆಗೆ ಕಿಂಚಿತ್ತೂ ಚ್ಯುತಿ ಬಾರದಂತೆ ಶಾಸ್ತ್ರೋಕ್ತವಾಗಿ ಚಾತುರ್ಮಾಸ್ಯ ವ್ರತವನ್ನು ಆಚರಿಸುವವರು ಪ್ರಾಯಶಃ ಶೃಂಗೇರಿ ಶ್ರೀಶಾರದಾ ಪೀಠದ ಅವಿಚ್ಛಿನ್ನ ಪರಂಪರೆಯ ಗುರುಗಳು ಮಾತ್ರ. ತಮ್ಮ ಧರ್ಮಯಾತ್ರೆಗಳ ಸಂದರ್ಭದಲ್ಲೂ ಸೂಕ್ತವಾದ ಸ್ಥಳಗಳನ್ನು ಮೊದಲೇ ಆಯ್ಕೆ ಮಾಡಿ, ಸಕಲ ಸಿದ್ಧತೆಗಳೊಂದಿಗೆ ಶೃಂಗೇರಿಯಲ್ಲಿ ಹೇಗೋ ಹಾಗೆಯೇ ಅಲ್ಲೂ ಈ ವ್ರತವನ್ನು ಸ್ವಲ್ಪವೂ ಚ್ಯುತಿ ಬಾರದಂತೆ ಆಚರಿಸುತ್ತಿರುವುದು ಶೃಂಗೇರಿ ಧರ್ಮಸಂಸ್ಥಾನದ ಜಗದ್ಗುರುಗಳವರ ವೈಶಿಷ್ಟ್ಯಗಳಲ್ಲಿ ಒಂದು. □

## ಕ್ಷಮಿಸುವುದನ್ನು ಕಲಿಯಿರಿ

ಭಕ್ತರಾದವರು ಯಾವಾಗಲೂ ಬೇರೆಯವರು ಮಾಡಿದ ಅಪರಾಧಗಳನ್ನು ಮರೆಯುವರು ಮತ್ತು ಕ್ಷಮಿಸುವರು. ಯಾರಾದರೂ ನಿಮ್ಮನ್ನು ನೋಯಿಸುವಂತೆ ನಡೆದುಕೊಂಡರೆ ಅವರ ವಿಷಯದಲ್ಲಿ ವಿರೋಧಭಾವನೆಯನ್ನು ಬೆಳೆಸಬಾರದು; ಪ್ರತೀಕಾರ ಮಾಡಲು ಪ್ರಯತ್ನಿಸಬಾರದು. ಅವರು ಎಂತಹ ಅಪರಾಧ ಮಾಡಿದ್ದರೂ ಸಹ ಕರುಣೆಯಿಂದ ಕ್ಷಮಿಸಬೇಕು; ಮರೆಯಬೇಕು. ನಮಗೆ ತೊಂದರೆ ಮಾಡಿದ್ದವರೇ ಆಗಿದ್ದರೂ, ಅವರ ಮನಸ್ಸನ್ನು ನೋಯಿಸಬಾರದು.

★ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥಮಹಾಸ್ವಾಮಿಗಳವರು

ಕೃಪೆ : ಡಾ। ಎಚ್.ವಿ.ನರಸಿಂಹಮೂರ್ತಿಯವರ ಕೃತಿ : 'ಶೃಂಗೇರಿ ಶ್ರೀ ಶಾರದಾಪೀಠ'

Krishna Rao
Ph :2520652
Mob. :9902029048
KISHAN

Studio & Video

Indoor Photography & Port Folio Photography,
Video & Mixing, Lamination
MAIN ROAD, MAJOOR & BANTAKAL.

# ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ಟೆಂಪಲ್ ಟ್ರಸ್ಟ್ (ರಿ.) ರಚನೆ

ಸುಮಾರು 700 ವರ್ಷ ಇತಿಹಾಸ ಇರುವ ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನದ ಜೀರ್ಣೋದ್ಧಾರದ ಬಗ್ಗೆ ಇತ್ತೀಚೆಗೆ ಶ್ಯಾನುಭಾಗ್ ಕೋರೆಗಾಂವ್ ಸುಬ್ಬರಾವ್‌ರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಶ್ರೀ ದೇವಸ್ಥಾನದ ಮುಂದಿನ ಜೀರ್ಣೋದ್ಧಾರದ ಬಗ್ಗೆ ವಿಸ್ತೃತ ಚರ್ಚೆ ನಡೆಸಲಾಯಿತು. ಶೃಂಗೇರಿ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಸ್ವಾಮಿಯವರ ಆಶೀರ್ವಾದದೊಂದಿಗೆ ಸಭೆ ಆರಂಭಿಸಲಾಯಿತು. ಸಭೆಗೆ ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಇದರ ಕಾರ್ಯದರ್ಶಿಯವರಾದ ಶ್ರೀ ಕರುಣಾಕರ ಬೆಳ್ಳೆಯವರು ಆಗಮಿಸಿ, ಸೂಕ್ತವಾದ ಮಾರ್ಗದರ್ಶನ ನೀಡಿದರು. ಅಲ್ಲದೆ ಮುಂದಿನ ಎಲ್ಲಾ ಕಾರ್ಯಕ್ರಮಗಳನ್ನು ಶ್ರೀ ಕರುಣಾಕರ ಬೆಳ್ಳೆಯವರ ಮಾರ್ಗದರ್ಶನದಲ್ಲಿ ನಡೆಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಅದರಂತೆ 'ಸ್ಥಳಿಕ ಶ್ರೀ ವಿಷ್ಣುಮೂರ್ತಿ ಟೆಂಪಲ್ ಟ್ರಸ್ಟ್'ನ್ನು ರಚಿಸಿ, ತಾ.7-7-2011 ರಂದು ಮುಲ್ಕಿ ಸಬ್‌ರಿಜಿಸ್ಟ್ರಾರ್ ಕಛೇರಿಯಲ್ಲಿ ರಿಜಿಸ್ಟರ್ ಮಾಡಲಾಯಿತು. ಟ್ರಸ್ಟ್‌ನಲ್ಲಿ ಒಟ್ಟು 7 ಸದಸ್ಯರಿದ್ದು, ಕೆ.ಸುಬ್ಬರಾವ್-ಅಧ್ಯಕ್ಷರು, ಶ್ರೀನಿವಾಸ ಶರ್ಮ-ಕಾರ್ಯದರ್ಶಿ, ಜಯರಾಮ ರಾವ್ ಉಡುಪಿ-ಖಜಾಂಚಿ, ಕೆಮ್ಮಣ್ಣು ಸತೀಶ ರಾವ್, ನ್ಯಾಯವಾದಿ ಕುಂಜಾರು ಮುರಳೀಧರ ರಾವ್, ರವೀಂದ್ರ ರಾವ್ ಬೊಂಟ್ರ ಅಲ್ಲದೆ, ಸ್ಥಾನಿಕ ಬ್ರಾಹ್ಮಣ ಸಭಾ, ಪಡುಬಿದ್ರಿ ಇದರ ಪ್ರತಿನಿಧಿಯಾಗಿ ಶ್ರೀ ಸುಭಾಕರ ರಾವ್, ಮುಂಡ್ಕೂರು ಇವರನ್ನು ಆಯ್ಕೆ ಮಾಡಲಾಯಿತು.

ಮುಂದಿನ ಜೀರ್ಣೋದ್ಧಾರ ಕಾರ್ಯಕ್ರಮವಾದ ಪೌಳಿಯ ಕೆಲಸ, ಅರ್ಚಕರಿಗೆ ವಸತಿಗೃಹ, ಅಲ್ಲದೆ ಇನ್ನಿತರ ಕಾರ್ಯವನ್ನು ವೇದಮೂರ್ತಿ ಶ್ರೀ ವಾಗೀಶ ಶಾಸ್ತ್ರಿಯವರ ಮಾರ್ಗದರ್ಶನದಲ್ಲಿ ಆಗಸ್ಟ್ ತಿಂಗಳಿಂದ ಪ್ರಾರಂಭಿಸಲು ತೀರ್ಮಾನಿಸಲಾಯಿತು. ಶ್ರೀ ದೇವಸ್ಥಾನದ ಎಲ್ಲಾ ಕೆಲಸಗಳಿಗೆ ಪಾದೆಬೆಟ್ಟು ಕುಟುಂಬಸ್ಥರು ಮತ್ತು ಸಮಾಜ ಬಾಂಧವರು ಸಂಪೂರ್ಣ ಸಹಕಾರ ಕೊಡಬೇಕೆಂದು ಕಾರ್ಯದರ್ಶಿ ಶ್ರೀನಿವಾಸ ಶರ್ಮರವರು ತಿಳಿಸಿರುತ್ತಾರೆ.

# ಸ್ವಂತ ಆಫೀಸ್

ಶ್ರೀಯುತ ಆದರ್ಶರಾವ್ B.Com, FCA, Chartered Accountant ಇವರು ಜಯನಗರ, 2ನೇ ಬ್ಲಾಕ್ ಸಮೀಪ ಇರುವ 'ಬ್ರಿಗೇಡ್ ಬಿಸಿನೆಸ್ ಸೂಟ್'ನಲ್ಲಿ ನೂತನ ಸ್ವಂತ ಆಫೀಸ್ ಖರೀದಿಸಿ 20-06-2011ರಿಂದ ವೃತ್ತಿಯನ್ನು ಮುಂದುವರಿಸಿದ್ದಾರೆ. ಇದೇ ಆಫೀಸಿನಲ್ಲಿ ಅವರ ಪತ್ನಿ ಶ್ರೀಮತಿ ಎಸ್.ಆರ್.ಜಯಾ, B.Arch., Architect & Valuer ಅವರು ಕೂಡಾ ತಮ್ಮ ವೃತ್ತಿಯನ್ನು ಆರಂಭಿಸಿದ್ದಾರೆ. ಶ್ರೀಯುತ ಆದರ್ಶರಾವ್ ಅವರು ಜಯನಗರದಲ್ಲಿರುವ ಶ್ರೀಮತಿ ಆರುಂಧತಿ ಮತ್ತು ಶ್ರೀ ಬಿ. ಗೋವಿಂದ ರಾವ್ ಅವರ ಪುತ್ರ. ಶ್ರೀಮತಿ ಜಯಾ ಅವರು ರಾಜಾಜಿನಗರದಲ್ಲಿರುವ ಶ್ರೀಮತಿ ನಾಗರತ್ನಮ್ಮ ಮತ್ತು ಶ್ರೀ ಎಸ್.ರಾಜಾರಾವ್ ಅವರ ಪುತ್ರಿ.

Office Address. :G-2, Brigade Business Suit, Near Ashoka Pillar, 2nd Block, 10th Main, Jayanagar, Bangalore-560011. Ph :26566060, Mob. :9845184260


## ರಾಮಾ ಅಟೋಮೊಬೈಲ್ಸ್

ಮಾರುತಿ ವಾಹನ ತಜ್ಞರು

ಮಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006.

ಫೋನ್ : 2454355, ಮೊಬೈಲ್ : 94485 45702




ಪ್ರೊ : ಯು. ಸಂತೋಷ ಕುಮಾರ್, ಉಜ್ಜೋಡಿ



## ದೇವಿಕೃಪಾ ಏಜೆನ್ಸೀಸ್, ನಂದಿಕೂರು

ಫೋನ್ : 2556536 (R), 2555466 (0)



ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.

ಪ್ರೊ। ಎಸ್. ಜನಾರ್ದನ್ ರಾವ್

ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು



## Buying and selling shares as easy as checking your emails

**Sharekhan Online Trading Account Features:**

- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's



Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com

Sharekhan
YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do 's & Don'ts by NCDEX. (Subbroker Regn.Nos: BSE: INS010606122;NSE: INS23106924)


## ಶ್ರೀ ಶಾರದಾಮಂಟಪ : ಚಾತುರ್ಮಾಸದಲ್ಲಿ ಗುರುಗಳ ಭೇಟಿ

ನಮ್ಮ ಕುಲಗುರುಗಳಾದ ದಕ್ಷಿಣಾಮ್ನಾಯ ಶ್ರೀ ಕ್ಷೇತ್ರ ಶೃಂಗೇರಿಯ ಜಗದ್ಗುರುಗಳಾದ ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರ ದರ್ಶನ ಪಡೆಯಲು ಈ ವರ್ಷ ಚಾತುರ್ಮಾಸದ ಅವಧಿಯಲ್ಲಿ ಶ್ರೀ ಕ್ಷೇತ್ರ ಶೃಂಗೇರಿಯಲ್ಲಿ ಸಮಾಜ ಬಾಂಧವರು ಜೊತೆಯಾಗಿ ಸೇರಿ ಗುರುಗಳ ಆಶೀರ್ವಾದ ಪಡೆಯಲು ಉದ್ದೇಶಿಸಲಾಗಿದೆ. ಕಳೆದ 27 ವರ್ಷಗಳಿಂದ ಸಮಾಜಬಾಂಧವರು ಒಂದುಗೂಡಿ ಗುರುಗಳ ಭೇಟಿಗಾಗಿ ಹೋಗುತ್ತಿದ್ದೇವೆ.

ಶ್ರೀ ಗುರುಗಳು ಈ ಹಿಂದೆ ನೀಡಿದ ಆದೇಶದಂತೆ ಈ ವರ್ಷ ತಾ.28-08-2011ರಂದು ಶ್ರೀ ಗುರುಗಳ ಆಶೀರ್ವಾದಕ್ಕಾಗಿ ತೆರಳುವುದೆಂದು ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘವು ನಿರ್ಧರಿಸಿದೆ. ಅದಕ್ಕಾಗಿ ಹೆಚ್ಚಿನ ಸಂಖ್ಯೆಯಲ್ಲಿ ಸಮಾಜ ಬಾಂಧವರು ಆಗಮಿಸಬೇಕೆಂದು ಅಪೇಕ್ಷಿಸಲಾಗಿದೆ. ಆಸಕ್ತರು ಶಾರದಾ ಮಂಟಪದ ಮೆನೇಜರ್ (0820-2520754), ಕಾರ್ಯದರ್ಶಿ ಬಿ. ಕೃಷ್ಣಮೂರ್ತಿ ರಾವ್ (9663049590), ಜತೆ ಕಾರ್ಯದರ್ಶಿ ಮಂಜುನಾಥ ಹೆಬ್ಬಾರ್ (9611099894) ಇವರಲ್ಲಿ ರೂ.250/-ನ್ನು ನೀಡಿ ತಾ.20-08-2011ರೊಳಗೆ ಹೆಸರನ್ನು ನೋಂದಾಯಿಸಬೇಕಾಗಿ ವಿನಂತಿ. ಆಸಕ್ತರು ಹೊರೆಕಾಣಿಕೆಯನ್ನು ಸಲ್ಲಿಸಬಹುದು.

-ಕಾರ್ಯದರ್ಶಿ

## ಪಡುಬಿದ್ರಿ : ಚಾತುರ್ಮಾಸದಲ್ಲಿ ಗುರುಗಳ ಭೇಟಿ

ಸ್ಥಾನಿಕ ಬ್ರಾಹ್ಮಣ ಸಭಾ, ಪಡುಬಿದ್ರಿ ಇದರ ವತಿಯಿಂದ ಸಂಘದ ವ್ಯಾಪ್ತಿಗೆ ಬರುವ ಸಮಾಜದವರಿಗೆ ಚಾತುರ್ಮಾಸದಲ್ಲಿ ಶ್ರೀ ಕ್ಷೇತ್ರ ಶೃಂಗೇರಿಯಲ್ಲಿ ಕುಲಗುರುಗಳಾದ ಜಗದ್ಗುರು ಶ್ರೀ ಶ್ರೀ ಭಾರತೀ ತೀರ್ಥ ಮಹಾಸನ್ನಿಧಾನಂಗಳವರ ದರ್ಶನ ಪಡೆಯಲು ಸಮಾಜ ಬಾಂಧವರು ಜೊತೆಯಾಗಿ ಸೇರಿ ಗುರುಗಳ ಆಶೀರ್ವಾದ ಪಡೆಯಲು ಉದ್ದೇಶಿಸಲಾಗಿದೆ.

ಈ ಪ್ರಯುಕ್ತ ತಾ.28-8-2011ರಂದು ಶ್ರೀ ಗುರುಗಳ ದರ್ಶನಕ್ಕಾಗಿ ಸಂಘವು ಬಸ್ಸಿನ ಏರ್ಪಾಡು ಮಾಡಿದೆ. ಆಸಕ್ತರು ಶ್ರೀನಿವಾಸ ಶರ್ಮ, ಪಾದೆಬೆಟ್ಟು (9945933363) ಮತ್ತು ನರೇಂದ್ರ ಸ್ವಾಮಿ (9980880590) ಇವರಲ್ಲಿ ರೂ.250/- (ಉಪಾಹಾರ ಸೇರಿ) ತಾ.21-8-2011ರ ಬಳ್ಕುಂಜೆಯಲ್ಲಿ ನಡೆಯುವ ಆಡಳಿತ ಮಂಡಳಿಯ ಸಭೆಯ ಒಳಗೆ ನೀಡಿ ಹೆಸರನ್ನು ನೋಂದಾಯಿಸಬೇಕಾಗಿ ವಿನಂತಿ. ಆಸಕ್ತರು ಹೊರೆಕಾಣಿಕೆಯನ್ನು ಸಲ್ಲಿಸಬಹುದು.

-ಕಾರ್ಯದರ್ಶಿ

## ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನ

ಉದಯಾದ್ರಿ ಕ್ಷೇತ್ರ, ಪಡುಬಿದ್ರಿ

### ಸೌರ ಋಗುಪಾಕರ್ಮವು

ತಾರೀಕು 09-09-2011ರಂದು ಶುಕ್ರವಾರ ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನ, ಉದಯಾದ್ರಿ ಕ್ಷೇತ್ರದಲ್ಲಿ ನಡೆಯಲಿದ್ದು, ಬೆಳಿಗ್ಗೆ 7ರಿಂದ ಪ್ರಾರಂಭವಾಗಲಿದೆ. ಸಮಾಜ ಬಾಂಧವರು ಸಮಯಕ್ಕೆ ಸರಿಯಾಗಿ ಬಂದು, ಉಪಾಕರ್ಮದಲ್ಲಿ ಭಾಗವಹಿಸಬೇಕಾಗಿ ವಿನಂತಿ. ಭಾಗವಹಿಸುವವರು ಹರಿವಾಣ, ಕೌಳಿಗೆ ಸೌಟನ್ನು ತರಬೇಕಾಗಿ ವಿನಂತಿ.


ಎಮ್. ದೇವಾನಂದ್ ಭಟ್ Cell :9845644556

## ಶೋಭಾ ಡಿಜಿಟಲ್

ಸ್ಟುಡಿಯೋ & ವೀಡಿಯೊ

ಉತ್ತಮ ಗುಣಮಟ್ಟದ ಫೋಟೋಗ್ರಾಫಿಗಾಗಿ ಸಂಪರ್ಕಿಸಿರಿ



ಬೆಳ್ವಾಯಿ-574213
(08258)-276177 (O), (918258)-324133 (O), 276777 (R)
ಎಡಪದವು - 574 164 (0824)-256374 (O) ಮಂಗಳೂರು, ದ.ಕ.



## Celebrations

Conference & Party Hall (Air Conditioned)

HALL AVAILABLE FOR BIRTHDAYS, CONFERENCES, CORPORATE MEETINGS, CLUB MEETINGS & OTHER FUNCTIONS.



FOR BOOKINGS CONTACT
ANUGRAHA BUILDING, UDUPI - MANIPAL ROAD, LAXMINDRA NAGAR, KUNJIBETTU POST, UDUPI - 576 102. Mob.: 9632099439
Prop. :ADARSH RAO



## PRAMOD AUTOMOBILES

30 Years of Service


KARANGALPADY, MANGALORE -575 003.

Ph :2493633 (O)
2493633 (H.O.)
2212723 (R)
Mobile :9448260225

: Wholesale & Retail Dealers in :
2 & 3 WHEELERS SPARES & ACCESSORIES

Prop. :Ln.K. HARSHA KUMAR

# ಕವಿಕಾವ್ಯ ಪರಿಚಯ-೧ : ಕವಿವರ ಲಕ್ಷ್ಮೀಶ



- ಹರಿದಾಸ ಮ.ನಾ.ಹೆಬ್ಬಾರ
ಎಂ.ಎ., ಬಿ.ಎಡ್.

ಕನ್ನಡ ಭಾಷೆಯನ್ನು ಸಾಮಾನ್ಯವಾಗಿ ಪೂರ್ವದ ಹಳೆಗನ್ನಡ, ಹಳೆಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ ಎಂಬ ನಾಲ್ಕು ವಿಭಾಗಗಳಲ್ಲಿ ಗುರುತಿಸಲಾಗುತ್ತಿದೆ. ಈ ವಿಭಾಗಗಳಿಗೆ ಸರಿಯಾಗಿಯೇ ಕನ್ನಡದಲ್ಲಿ ಸಾಹಿತ್ಯವೂ ಕೂಡಾ ಬೆಳೆದು ಬಂದಿದೆ. ಪೂರ್ವದ ಹಳೆಗನ್ನಡ (ಕ್ರಿ.ಶ. 9ನೇ ಶತಮಾನದ ವರೆಗಿನ ಕಾಲ)ದ ಕಾಲದಲ್ಲಿ ಹೆಚ್ಚಾಗಿ ಗದ್ಯ ಮತ್ತು ಗದ್ಯ-ಪದ್ಯ ಮಿಶ್ರವಾಗಿರುವ ಚಂಪೂ ಪ್ರಕಾರಗಳನ್ನು ಗುರುತಿಸುತ್ತೇವೆ. ಹಾಗೆಯೇ ಹಳೆಗನ್ನಡ (ಕ್ರಿ.ಶ. 9ನೇ ಶತಮಾನದಿಂದ 12ನೇ ಶತಮಾನದ ವರೆಗಿನ ಕಾಲ)ದ ಕಾಲದಲ್ಲಿ ಹೆಚ್ಚಾಗಿ ಗದ್ಯ ಪದ್ಯ ಮಿಶ್ರವಾಗಿರುವ ಚಂಪೂ ಮತ್ತು ವಚನ ಸಾಹಿತ್ಯಗಳ ಪ್ರಕಾರವನ್ನು ಗುರುತಿಸುತ್ತೇವೆ. ಅಂತೆಯೇ ನಡುಗನ್ನಡ(ಕ್ರಿ.ಶ.12ರಿಂದ 19ನೇ ಶತಮಾನದ ವರೆಗಿನ ಕಾಲ)ದ ಸಾಹಿತ್ಯ ಪ್ರಕಾರದಲ್ಲಿ ಹೆಚ್ಚಾಗಿ ಷಟ್ಪದಿ ಕಾವ್ಯಗಳ ರಚನೆಯಾದುದನ್ನು ಗಮನಿಸುತ್ತೇವೆ. ರಾಘವಾಂಕ, ಲಕ್ಷ್ಮೀಶ, ಕುಮಾರವ್ಯಾಸ, ನರಹರಿ, ಚಾಟು ವಿಠಲನಾಥ, ಚಾಮರಸ ಮುಂತಾದವರು ವಾರ್ಧಿಕ, ಭಾಮಿನಿ ಷಟ್ಪದಿಗಳಲ್ಲಿ ತಮ್ಮ ಕೃತಿಗಳನ್ನು ರಚಿಸಿ ಪ್ರಖ್ಯಾತರಾದರು. ಅಂತಹವರ ಸಾಲಿನಲ್ಲಿ ಕನ್ನಡಿಗರ ಮನೆ ಮಾತಾಗಿರುವ ಷಟ್ಪದಿ ಕವಿಗಳೆಂದರೆ ಕುಮಾರವ್ಯಾಸ, ಲಕ್ಷ್ಮೀಶ ಮತ್ತು ತೊರವೆಯ ನರಹರಿ-ಇವರುಗಳು ಪ್ರಮುಖರು. ಒಬ್ಬ ಮಹಾಭಾರತವನ್ನು, ಮೂರನೆಯವನು ರಾಮಾಯಣವನ್ನು ಬರೆದರೆ ಕವಿ ಲಕ್ಷ್ಮೀಶನು ಮಹಾಭಾರತದ ಅಶ್ವಮೇಧ ಪರ್ವದ ಕಥೆಯನ್ನು, ಜೈಮಿನಿ ಋಷಿಯ ಸಂಸ್ಕೃತ ಕಾವ್ಯವನ್ನು ಕನ್ನಡಕ್ಕೆ ಅನುವಾದಿಸಿರುವನು. ಇದು ಮೇಲ್ನೋಟಕ್ಕೆ ಅನುವಾದವೆಂದು ಕಂಡರೂ ಲಕ್ಷ್ಮೀಶನು ಇದರಲ್ಲಿ ತನ್ನ ಸ್ವಂತಿಕೆಯನ್ನು ಮೆರೆದು ಸ್ವತಂತ್ರ ಕೃತಿಯೆಂಬಂತೆ ರಚಿಸಿರುವನು. ಕವಿಯು ಸ್ವತಹಾ ವಿಷ್ಣುಭಕ್ತನಾಗಿದ್ದು ತನ್ನ ಕಾವ್ಯದಲ್ಲಿ ಶ್ರೀಕೃಷ್ಣನ ಪಾರಮ್ಯವನ್ನು ಎತ್ತಿ ತೋರಿಸಿರುವನು. ಇವನು ಬರೆದ 'ಕನ್ನಡ ಜೈಮಿನಿ ಭಾರತ'ವಿಡೀ ವಿಷ್ಣು ಭಕ್ತರ ಚರಿತ್ರೆಯಿಂದಲೇ ಕೂಡಿದೆ. ಕನ್ನಡದ ಪ್ರಖ್ಯಾತ ಆರು ಷಟ್ಪದಿಗಳಲ್ಲಿ ಕೊನೆಯದಾದ ಮತ್ತು ದೊಡ್ಡದಾದ ವಾರ್ಧಿಕ ಷಟ್ಪದಿಯನ್ನು ತನ್ನ ಕಾವ್ಯದ ಶೈಲಿಯ ಮಾಧ್ಯಮವಾಗಿಸಿಕೊಂಡು ಲಕ್ಷ್ಮೀಶ ಕವಿಯು ತನ್ನ 'ಕನ್ನಡ ಜೈಮಿನಿ ಭಾರತ'ವನ್ನು ಬರೆದಿರುವನು.

ಕರ್ನಾಟಕದ ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲೂಕಿನ ದೇವನೂರು ಎಂಬುದು ಕವಿ ಲಕ್ಷ್ಮೀಶನ ಹುಟ್ಟೂರು. ಸುಮಾರು ಕ್ರಿ.ಶ. 1550 ಈತನ ಜೀವಿತದ ಕಾಲವೆಂದು ಕವಿ ಚರಿತ್ರಕಾರರು ಅಭಿಪ್ರಾಯ ಪಡುತ್ತಾರೆ. ಭಾರದ್ವಾಜ ಗೋತ್ರದ ಅಣ್ಣಮಾಂಕ ಎಂಬವನು ಲಕ್ಷ್ಮೀಶನ ತಂದೆ. ದೇವನೂರಿನಲ್ಲಿರುವ ಲಕ್ಷ್ಮೀರಮಣ ಸ್ವಾಮಿಯು ಈ ಕವಿಯ ಆರಾಧ್ಯದೈವ. ಈ ದೇವರ ಅಂಕಿತದಲ್ಲಿಯೇ ಕವಿಯು ತನ್ನ ಕಾವ್ಯವನ್ನು ಬರೆದಿರುವನು. ಜೈಮಿನಿ ಋಷಿಯು ಸಂಸ್ಕೃತ ಭಾಷೆಯಲ್ಲಿ ಹೇಳಿರುವ ಮಹಾಭಾರತದ ಅಶ್ವಮೇಧ ಪರ್ವದ ಕಥೆಯು ಪ್ರಸಿದ್ಧವಾಗಿದ್ದು ಆ ಕಾಲದಲ್ಲಿ ಪಂಡಿತರುಗಳಿಂದ ಮನೆ ಮನೆಗಳಲ್ಲಿ ವಾಚಿಸಲ್ಪಡುತ್ತಿದ್ದು ವಿದ್ವಾಂಸರು ಅದನ್ನು ಕನ್ನಡದಲ್ಲಿ ವ್ಯಾಖ್ಯಾನಿಸುತ್ತಿದ್ದರು. ಇದರ ವಾಚನ ಮತ್ತು ವ್ಯಾಖ್ಯಾನಗಳನ್ನು ಬಿಡದೆ ಕೇಳಿಸಿಕೊಳ್ಳುತ್ತಿದ್ದ ಲಕ್ಷ್ಮೀಶನಿಗೆ ಈ ಕಾವ್ಯವನ್ನು ಕನ್ನಡಕ್ಕೆ ಅನುವಾದಿಸಬೇಕೆಂಬ ಆಸೆಯಾಯಿತು. ಈತನು 'ಹೆಬ್ಬಾರ' ವಂಶದವನಾಗಿದ್ದು ಲಕ್ಷ್ಮೀಕಾಂತ ಹೆಬ್ಬಾರ ಎಂಬುದು ಇವನ ಪೂರ್ಣ ಹೆಸರು. ಲಕ್ಷ್ಮಿ ಎಂಬವಳು ಈತನ ಧರ್ಮಪತ್ನಿ. ಇವನು 'ಲಕ್ಷ್ಮೀಶ' ಎಂಬ ಹೆಸರಿನಿಂದ ತನ್ನ ಕಾವ್ಯವನ್ನು ಬರೆದನು. ಕಾವ್ಯವು ಪೂರ್ತಿಯಾದಾಗ ಪಂಡಿತ-ಪಾಮರರು ಸೇರಿದ ಸಭೆಯಲ್ಲಿ ಲಕ್ಷ್ಮೀಶನು ತನ್ನ ಕನ್ನಡ ಜೈಮಿನಿ ಭಾರತವನ್ನು ವಾಚಿಸಿ ಸರ್ವರ ಮೆಚ್ಚುಗೆಯನ್ನು ಪಡೆದನು. ಇವನ ಜನಪ್ರಿಯತೆಯು ಪಂಡಿತ ಮಂಡಳಿಯಲ್ಲಿ ಸಾಕಷ್ಟು ಮತ್ಸರಕ್ಕೆ ಕಾರಣವಾಯಿತು. ಒಮ್ಮೆ ಮನೆಯಲ್ಲಿ ಕವಿ ಲಕ್ಷ್ಮೀಶನಿಲ್ಲದ ವೇಳೆಯಲ್ಲಿ ಅವನ ಅಮೂಲ್ಯವಾದ 'ಜೈಮಿನಿ ಭಾರತ'ದ ಓಲೆಗರಿ ಗ್ರಂಥವು ಕಳವಾಗಿ ಅಗ್ನಿಗಾಹುತಿಯಾಯಿತು. ಇದನ್ನು ತಿಳಿದ ಕವಿ ಲಕ್ಷ್ಮೀಶನು ತನ್ನ ಸರ್ವಸ್ವವೂ ಲೂಟಿಯಾಯಿತೆಂದು ಅತಿಯಾಗಿ ದುಃಖಿಸಿದನು. ಆದರೆ ಚೆನ್ನಾಗಿ ಓದು ಬರೆಹ ಬಲ್ಲವಳಾಗಿದ್ದ ಆತನ ಪತ್ನಿ ಲಕ್ಷ್ಮಿಯು ಅವನಿಗರಿವಿಲ್ಲದಂತೆಯೇ ತನ್ನ ಪತಿಯು ರಚಿಸಿದ್ದ ಕನ್ನಡ ಜೈಮಿನಿ ಭಾರತದ ಒಂದು ಪ್ರತಿಯನ್ನು ಆಗಲೇ ರಚಿಸಿಟ್ಟಿದ್ದಳು. ತನ್ನ ಪತಿಯ ರೋದನವನ್ನು ಕಂಡ ಆಕೆಯು ತಾನು ಬರೆದಿದ್ದ ಗ್ರಂಥದ ಪ್ರತಿಯನ್ನು ತಂದು ನಗುನಗುತ್ತಲೇ ತನ್ನ ಪತಿಯ ಹಸ್ತದಲ್ಲಿಟ್ಟಳು. ಇದನ್ನು ಕಂಡ ಲಕ್ಷ್ಮೀಶನು ಕಡು ಬಡವನಿಗೆ ನಿಧಿ ದೊರಕಿದಂತೆ ಹಿರಿ ಹಿರಿ ಹಿಗ್ಗಿ ಹೊಸ ಹುಟ್ಟನ್ನೇ ಪಡೆದಂತಾದನು.

**ಕನ್ನಡ ಜೈಮಿನಿ ಭಾರತ :** ವಿಷ್ಣುಭಕ್ತನಾಗಿದ್ದ ಕವಿ ಲಕ್ಷ್ಮೀಶನು ಮಹಾಭಾರತದ ಅಶ್ವಮೇಧ ಪರ್ವದ ಕಥೆಯನ್ನು ಸಂಸ್ಕೃತದಲ್ಲಿ ಜೈಮಿನಿ ಋಷಿಗಳು ಹೇಳಿದ್ದನ್ನು ಕನ್ನಡಕ್ಕೆ ಭಟ್ಟಿ ಇಳಿಸಿರುವನು. ತನ್ನ ಗ್ರಂಥವನ್ನು 'ಕೃಷ್ಣ ಚರಿತಾಮೃತ' ಎಂದು ಹೇಳಿಕೊಂಡಿರುವ ಕವಿಯು ಶ್ರೀಕೃಷ್ಣನ ಹೆಸರು ಹೇಳಬೇಕಾದಲ್ಲೆಲ್ಲ 'ದೇವಪುರ ನಿಲಯ ಲಕ್ಷ್ಮೀರಮಣ ಸ್ವಾಮಿ' ಎಂದು ಹೇಳಿರುವನು. ಶ್ರೀಕೃಷ್ಣನನ್ನೂ ಲಕ್ಷ್ಮೀರಮಣನನ್ನೂ ಅಭೇಧವಾಗಿ ಕವಿ ವರ್ಣಿಸಿರುವನು. ಇವನ ಕಾವ್ಯವು ನಾದಮಯವಾಗಿದ್ದು, ಸಂಗೀತ ಶಾಸ್ತ್ರಕ್ಕನುಗುಣವಾಗಿ ರಾಗವತ್ತಾಗಿ ಹಾಡಬಹುದಾದ್ದರಿಂದ ಈ ಕವಿಗೆ 'ನಾದಲೋಲ'ನೆಂದೂ ಹಲವಾರು ವಿಧದ ಉಪಮಾಲಂಕಾರಗಳಿಂದ ಕೂಡಿದ್ದು ಓದುಗರ ಮನ ಸೂರೆಗೊಳ್ಳುತ್ತಿರುವುದರಿಂದ ಇವನನ್ನು 'ಉಪಮಾಲೋಲ'ನೆಂದೂ ಹೇಳಲಾಗುತ್ತದೆ. 'ಕನ್ನಡ ಕವಿಗಳೆಂಬ ಮಾವಿನ ತೋಪಿಗೆ ಚೈತ್ರ ಮಾಸದಂತಿರುವವನು' ಎಂಬ ಅರ್ಥದಲ್ಲಿ 'ಕರ್ಣಾಟ ಕವಿಚೂತವನ ಚೈತ್ರ' ಎಂಬ ಬಿರುದು ಕೂಡಾ ಈತನಿಗಿದೆ. ಶಬ್ದಾಲಂಕಾರ ಮತ್ತು ಅರ್ಥಾಲಂಕಾರಗಳಿಂದ ಇಡಿಯ ಕಾವ್ಯವು ಅತ್ಯಂತ ರಂಜನೀಯವಾಗಿದೆ. ಪ್ರಾಸಾನುಪ್ರಾಸಗಳ ವೈಭವವನ್ನೇ ಕಾವ್ಯದ ತುಂಬ ಕಾಣಬಹುದು. ಕವಿಯು ತನ್ನ ಆರಾಧ್ಯ ದೇವರಾದ ದೇವಪುರ (ದೇವನೂರು) ಲಕ್ಷ್ಮೀರಮಣ ಸ್ವಾಮಿಯನ್ನು ಸ್ತುತಿಸುವ ನಾಂದಿಯ ಪದ್ಯ ಇಂತಿದೆ:-

*ಶ್ರೀಮಧುವಿನಂಬಕ ಚಕೋರಕಂ ಪೊರೆಯೆ ಭ-1*
*ಕ್ತಾವಳಿಯ ಹೃತ್ಕುಮುದ ಕೋರಕಂ ಬಿರಿಯೆ ಜಗ-1*
*ತೀವಲಯದಮಲ ಸೌಭಾಗ್ಯ ರತ್ನಾಕರಂ*
*ಪೇರ್ಚಿನಿಂ ಮೇರೆವರಿಯೆ ॥*
*ಆವಗಂ ಸರಸ ಕರುಣಾಮೃತದ ಕಲೆಗಳಿಂ ।*
*ತೀವಿದೆಳನಗೆಯ ಬೆಳುದಿಂಗಳಂ ಪಸರಿಸುವ ।*
*ದೇವಪುರ ನಿಲಯ ಲಕ್ಷ್ಮೀರಮಣ*
*ನಾಸ್ಯಚಂದ್ರಾನಂದ ಮೆಮಗೀಯಲಿ ॥*


ಜೈಮಿನಿ ಭಾರತದ ಕಥೆಯೇ ಒಂದು ವಿಶಿಷ್ಟ ಕಥೆಯಾಗಿದೆ. ಮಹಾಭಾರತ ಯುದ್ಧಾನಂತರದಲ್ಲಿ ಹಸ್ತಿನಾವತಿಯನ್ನು ಧರ್ಮದಿಂದ ಆಳುತ್ತಿದ್ದ ಧರ್ಮರಾಜನು ತನಗೆ ಬಂದಿರುವ ಬಂಧು ಹತ್ಯಾದೋಷದ ಪರಿಹಾರಕ್ಕಾಗಿ ಹಮ್ಮಿಕೊಳ್ಳುವ ಯಾಗವೇ ಅಶ್ವಮೇಧ ಯಾಗ. ಈ ಯಾಗದ ನೆಪದಿಂದ ಯಾಗಾಶ್ವವು ವಿಷ್ಣುಭಕ್ತರನೇಕರ ದೇಶಗಳಲ್ಲಿ ಸಂಚರಿಸುತ್ತದೆ. ಇಲ್ಲಿ ಶ್ರೀಕೃಷ್ಣನ ಭಕ್ತರೇ ಪಾಂಡವರಿಗೆ ವಿರೋಧಿಗಳಾಗಿರುತ್ತಾರೆ. ಇಲ್ಲೆಲ್ಲಾ ಶ್ರೀಕೃಷ್ಣ ಪಾರಮ್ಯವನ್ನು ನಾವು ಕಾಣಬಹುದು. ಪಾಂಡವರ ಧಾರ್ಮಿಕತೆಯನ್ನೂ, ಸರ್ವೋತ್ತಮತ್ವವನ್ನೂ, ತನಗಿರುವ ಪಾಂಡವ ಸ್ಥಾಪನಾಚಾರ್ಯ ಎಂಬ ಬಿರುದನ್ನೂ ಶ್ರೀಕೃಷ್ಣನು ಈ ಕಾವ್ಯದಲ್ಲಿ ಸಾರ್ಥಕಪಡಿಸಿಕೊಂಡುದನ್ನು ನಾವು ಕಾಣಬಹುದು.

(ಮುಂದುವರಿಯುವುದು)

# ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಆಡಳಿತ ಮಂಡಳಿ ಸದಸ್ಯರ ಪರಿಚಯ

(ಈ ಹಿಂದೆ ಪ್ರಕಟಿಸಿದ ಲೇಖನದ ಕೊನೆಯ ಭಾಗ)

ಮಾಹಿತಿ ಸಂಗ್ರಹ/ಲೇಖನ :
ಡಾ। ವೈ. ರವೀಂದ್ರನಾಥ ರಾವ್



**ಶ್ರೀ ವಾಸುದೇವ ಬಾಬು ರಾವ್**

ಬೆಳ್ಮಣ್ಣು ಬೈಲುಮನೆ ಶ್ರೀ ಬಾಬುರಾವ್ ಮತ್ತು ಶ್ರೀಮತಿ ಶೇಷಮ್ಮ ಇವರ ಪುತ್ರರಾದ ಶ್ರೀಮಾನ್ ವಾಸುದೇವ ರಾವ್ ನಮ್ಮ ಸಂಘದ ಅತ್ಯಂತ ಹಿರಿಯ ನಿರ್ದೇಶಕರೆಂಬ ಗೌರವಕ್ಕೆ ಪಾತ್ರರಾದ ವ್ಯಕ್ತಿ. ತಮ್ಮ ಪ್ರಾಥಮಿಕ ಶಿಕ್ಷಣದ ಬಳಿಕ ಕಿರುಪ್ರಾಯದಲ್ಲೇ ಹೋಟೆಲ್ ಉದ್ಯೋಗ ಸೇರಿ ಈ ಕ್ಷೇತ್ರದಲ್ಲಿ 1946ರಿಂದ 2006ರ ವರೆಗೆ 61 ವರ್ಷಗಳ ಸುದೀರ್ಘ ಸೇವೆ ಸಲ್ಲಿಸಿ ಹೋಟೆಲ್ ವ್ಯವಸಾಯದಲ್ಲಿ ಅಪಾರ ಅನುಭವ ಪಡೆದಿದ್ದಾರೆ. ತಮ್ಮ ಸೇವಾವಧಿಯಲ್ಲಿ ಗೋವಾ ಹಾಗೂ ಮಹಾರಾಷ್ಟ್ರದ ಅನೇಕ ಕಡೆ ಕಾರ್ಯನಿರ್ವಹಿಸಿ ಅಪಾರ ಸಂಖ್ಯೆಯ ಗ್ರಾಹಕರನ್ನು, ಸ್ನೇಹಿತರನ್ನು ಗಳಿಸಿದ ಅನುಭವ ಇವರದು.

ದೈವೀಶಕ್ತಿ, ಆಧ್ಯಾತ್ಮಿಕ ವಿಚಾರ, ಚಿಂತನೆಗಳಲ್ಲಿ ಆಸಕ್ತಿ ಹೊಂದಿರುವ ಶ್ರೀ ವಾಸುದೇವ ರಾಯರು, ಸಂಘವು ಏಳಿಗೆ ಹೊಂದಲು ಅದರ ಆದಾಯವನ್ನು ಇನ್ನಷ್ಟು ಹೆಚ್ಚಿಸಿ, ಯಾವುದೇ ಹೊಸದಾಗಿ ಕಾರ್ಯ ಕೈಗೊಳ್ಳುವ ಮುನ್ನ ಅದರ ಅವಶ್ಯಕತೆಯನ್ನು ಅರ್ಥೈಸಿ, ಅದರ ಉಪಯೋಗದತ್ತ ಹೆಚ್ಚಿನ ಗಮನಹರಿಸಿ, ಅತ್ಯಾವಶ್ಯಕವಾದ ಕಾರ್ಯಗಳನ್ನಷ್ಟೇ ಕೈಗೊಳ್ಳುವ ನಿರ್ಧಾರಗಳು ಸಂಘವನ್ನು ಮುನ್ನಡೆಸಲು ಸಹಕಾರಿಯಾಗಬಲ್ಲದೆಂಬುವುದು ಇವರ ಪ್ರಮುಖ ಸಲಹೆಗಳಾಗಿವೆ. ಇವರಿಗೆ ಮೂವರು ಪುತ್ರರು ಹಾಗೂ ಮೂವರು ಪುತ್ರಿಯರು ಮತ್ತು ಗೃಹಿಣಿ ಪತ್ನಿ ಶ್ರೀಮತಿ ನಾಗವೇಣಿಯೊಂದಿಗೆ ಉಡುಪಿ ಕುಂಜಿಬೆಟ್ಟುವಿನ ವಿಬುಧಪ್ರಿಯ ನಗರದಲ್ಲಿ ವಾಸ್ತವ್ಯ ಹೊಂದಿದ್ದಾರೆ.

**ಶ್ರೀ ಕೆ. ವೇಣುಗೋಪಾಲ ರಾವ್**



ಶ್ರೀ ಕೆ. ವೇಣುಗೋಪಾಲ ರಾವ್ ಕಾರ್ಕಳ ತಾಲೂಕಿನ ಕರ್ವಾಲಿನವರು. ಇವರ ಮಾತಾಪಿತರು ದಿ। ಶ್ರೀಮತಿ ರತ್ನಾವತಿ ಮತ್ತು ದಿ। ಶ್ರೀ ಕೆ. ಶೇಷಪ್ಪಯ್ಯ. ಸ್ನಾತಕೋತ್ತರ ಪದವಿಯೊಂದಿಗೆ ಬ್ಯಾಂಕಿನ ವಿದ್ಯಾರ್ಹತೆ ಸಿಎಐಐಬಿ-1 ಅನ್ನೂ ಹೊಂದಿರುವ ಶ್ರೀ ರಾವ್, ಎರಡೂವರೆ ದಶಕಗಳಿಗಿಂತಲೂ ಹೆಚ್ಚು ಕಾಲ ಸಿಂಡಿಕೇಟ್ ಬ್ಯಾಂಕಿನ ವಿವಿಧ ಶಾಖೆಗಳಲ್ಲಿ ಕರ್ನಾಟಕದ ಹಲವು ಕಡೆ ಸೇವೆ ಸಲ್ಲಿಸಿ ಸ್ವಯಂ ನಿವೃತ್ತಿ ಪಡೆದಿದ್ದು, ತಮ್ಮ ಬ್ಯಾಂಕಿನ ಸೇವಾವಧಿಯಲ್ಲಿ ಜಾಹೀರಾತು/ಪ್ರಚಾರ ವಿಭಾಗದಲ್ಲಿನ ಇವರ ವಿಶೇಷ ಸೇವೆಗೆ ಬ್ಯಾಂಕಿನಿಂದ ಮೆಚ್ಚುಗೆ ಗಳಿಸಿದ್ದರು. ಹಾಗೆಯೇ ಬ್ಯಾಂಕಿನ GIANT (ಗೃಹಪತ್ರಿಕೆ)ಯ ಸಹಾಯಕ ಸಂಪಾದಕರಾಗಿ ಕೂಡಾ ಕಾರ್ಯ ನಿರ್ವಹಿಸಿದ್ದರು. ಬಳಿಕ ಒಂಬತ್ತು ವರ್ಷಗಳ ಕಾಲ ನಮ್ಮ ಶ್ರೀ ಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸಂಘದಲ್ಲಿ ವ್ಯವಸ್ಥಾಪಕ ಮತ್ತು ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ ಓರ್ವ ಅನುಭವಿ ಬ್ಯಾಂಕರ್ ಆಗಿದ್ದಾರೆ.

ಸಂಘದ ಕ್ರಿಯಾಶೀಲ ನಿರ್ದೇಶಕರಲ್ಲೊಬ್ಬರಾದ ಶ್ರೀ ವೇಣುಗೋಪಾಲ ರಾವ್, ಶ್ರೀಶಾರದಾ ಪತ್ರಿಕೆಯ ಪ್ರಧಾನ ಸಂಪಾದಕರಾಗಿ ಮತ್ತು ಒಂದು ವರ್ಷ ಕಾಲ ಖಜಾಂಚಿಯಾಗಿ, ಕಾರ್ಯದರ್ಶಿಯಾಗಿ ಮತ್ತು ಯುವ ವಿಭಾಗದ ಅಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸಿ ಸಂಘದ ಚಟುವಟಿಕೆಗಳ ಯಶಸ್ಸಿಗೆ ಸಹಕರಿಸಿದ್ದಾರೆ. ಹಾಗೆಯೇ ಇವರು ಕರ್ನಾಟಕ ರಾಜ್ಯ ಜೇಸೀಸ್‌ನ ಉಪಾಧ್ಯಕ್ಷರಾಗಿ ಮತ್ತು ಇವರ ಸಂಪಾದಕತ್ವದಲ್ಲಿ ಜೆಸಿಐನ ಪತ್ರಿಕೆಗಳಾದ 'ವೆಂಚರ್' ಮತ್ತು 'ತರುಣವಾಣಿ'ಗಳು ರಾಜ್ಯ/ರಾಷ್ಟ್ರೀಯ ಪ್ರಶಸ್ತಿಗಳಿಸಿರುವುದು ಇವರ ಕಾರ್ಯದಕ್ಷತೆಗೆ ಸಾಕ್ಷಿಯಾಗಿದೆ. ಜಯಂಟ್ಸ್ ಅಂತಾರಾಷ್ಟ್ರೀಯ ಉಡುಪಿ ಘಟಕದ ಸ್ಥಾಪಕ ಅಧ್ಯಕ್ಷರಾಗಿ, ಇದರ ಫೆಡರೇಶನ್-6ರ ನಿರ್ದೇಶಕರಾಗಿ ಮತ್ತು ಉಪಾಧ್ಯಕ್ಷರಾಗಿ ಮತ್ತು ಯರ್ಲಪಾಡಿ ಯುವಕ ಮಂಡಲದ ಅಧ್ಯಕ್ಷ, ಕಾರ್ಯದರ್ಶಿಯಾಗಿ ಕೂಡಾ ಸೇವೆ ಸಲ್ಲಿಸಿ ಸಾರ್ವಜನಿಕ ರಂಗದಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಓದುವುದು, ಬರೆಯುವುದು, ಸಾರ್ವಜನಿಕ ಸೇವಾಸಕ್ತಿ, ಭಕ್ತಿ ಗೀತೆಗಳನ್ನು ಆಲಿಸುವುದು ಇವರ ಹವ್ಯಾಸಗಳಾಗಿದ್ದು, ವ್ಯಕ್ತಿತ್ವ ವಿಕಸನ ಕ್ಷೇತ್ರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿರುವ ಇವರು ನಾಟಕ ಮತ್ತು ಯಕ್ಷಗಾನ ಕಲೆಗಳಲ್ಲೂ ಆಸಕ್ತಿ ಹೊಂದಿದ್ದಾರೆ. ಸಂಘದ ಪ್ರತಿಯೊಬ್ಬರೂ ಪರಸ್ಪರ ಗೌರವದಿಂದ ಎಲ್ಲರೊಡನೆ ಬೆರೆತು ಸಂಘದ ಹಿತಾಸಕ್ತಿಯಿಂದ ಇನ್ನೂ ಹೆಚ್ಚು ಕಾರ್ಯ ನಿರ್ವಹಿಸುವ ಮೂಲಕ ನಮ್ಮ ಸಂಘವು ಇನ್ನಷ್ಟು ಸುಧಾರಣೆಗೊಳ್ಳಲು ಸಾಧ್ಯವೆನ್ನುವ ಇವರ ಪತ್ನಿ ಶ್ರೀಮತಿ ಕೆ. ಶ್ರೀಮತಿ ವಿ.ರಾವ್ ವಾಣಿಜ್ಯ ಶಾಸ್ತ್ರ ಪದವೀಧರೆಯಾಗಿದ್ದು ಪ್ರಸ್ತುತ ಮಣಿಪಾಲದ ಸಹಕಾರಿ ಬ್ಯಾಂಕ್‌ನಲ್ಲಿ ಅಧಿಕಾರಿಯಾಗಿದ್ದಾರೆ. ಪುತ್ರಿ ಕು। ಸ್ವಾತಿ ಕಂಪ್ಯೂಟರ್ ವಿಜ್ಞಾನದಲ್ಲಿ ನಿಟ್ಟೆಯಲ್ಲಿ ಅಂತಿಮ ಪದವಿ ಓದುತ್ತಿದ್ದು ಕ್ಯಾಂಪಸ್ ಆಯ್ಕೆಯಲ್ಲಿ ಇನ್ಫೋಸಿಸ್ ಸೇರಲಿದ್ದಾಳೆ.

ಸಂಪರ್ಕ : 0820-2527441 (R)

# ತುಳುನಾಡಿನಲ್ಲಿ ಬ್ರಾಹ್ಮಣ್ಯ

ದಿ। ಪ್ರೊ। ಗುರುರಾಜ ಭಟ್ಟರ
ಕೃತಿಯಿಂದ ಸಂಗ್ರಹಿಸಿದ ಭಾಗ
ಸಂಗ್ರಹ : ಸಿ.ಎಸ್.ರಾವ್.

(ಹಿಂದಿನ ಸಂಚಿಕೆಯಿಂದ)

61. ಕದಿರಿ ನರಸಿಂಹ ಎಂಬಾತನು ಒಂದು ಕೆರೆಯನ್ನು ಕಡಿಸಲಾಗಿ ಅದನ್ನು ನರಸಿಂಹ ದೇವರ ಸ್ಥಾನಿಕರಾದ ವಿತ್ತಯ್ಯ ಮತ್ತು ಕುಪ್ಪಯ್ಯ ಎಂಬವರ ವಶಕೊಟ್ಟುದು ಕ್ರಿ.ಶ.1503ರ ಶಾಸನದಿಂದ ತಿಳಿದು ಬರುತ್ತದೆ.

62. ಕಾಲ ನಿರೂಪವಿಲ್ಲದ ಚಾಮರಾಜ ನಗರ ತಾಲೂಕಿನಲ್ಲಿಯ ರಾಮೇಶ್ವರ ದೇವಾಲಯದ ಶಿಲಾ ಲೇಖವೊಂದು ಆ ದೇವಸ್ಥಾನದ ಸ್ಥಾನಿಕ ಸಿಂಗಯ್ಯನಿಗೆ ಮಾಡಿದ ಭೂದಾನ ಶಾಸನವನ್ನು ಒಳಗೊಂಡಿದೆ.

63. ನೆಲ್ಲೂರು ಜಿಲ್ಲೆಯ ಚಿಲಮಕೂರು ಎಂಬಲ್ಲಿಯ ಕೈಲಾಸ ದೇವಾಲಯದ ಸ್ಥಾನಿಕರನ್ನು ಸಂಸ್ಥಾನಕುಲು ಎಂದು ಉಲ್ಲೇಖಿಸಿದೆ.

64. ರಾಷ್ಟ್ರ ಅಧಿಕಾರಿಗಳೊಡನೆ ಸ್ಥಾನಿಕರು ಸಹಕರಿಸಿ, ಮಾಡಿದ ಸತ್ಕಾರ್ಯಗಳಿಗೆ ಜನರನ್ನು ಬಹುಮಾನಿಸುವ ಪದ್ಧತಿಗೆ ದೃಷ್ಟಾಂತವಾಗಿ ಕ್ರಿ.ಶ. 1530ರ ಮಲೂರು ತಾಲೂಕಿನ ಎಲವಗುಳಿ ಶಿಲಾ ಲೇಖವು ನಿಂತಿದೆ. ತೆಂಕಲ್ನಾಡಿನ ಸ್ಥಾನಿಕರು ವಿಜಯನಗರದ ವೈಸರಾಯನ ಏಜಂಟರೊಬ್ಬರೊಡನೆ ಸಹಕರಿಸಿ ಸೇನ ಬೋವ ತಿಮ್ಮರಸನಿಗೆ ಕೆರೆಯನ್ನೊಂದು ಕಟ್ಟಿಸಿದುದಕ್ಕಾಗಿ ಭೂಮಿಯನ್ನು ಕೊಟ್ಟುದುದರ ದಾಖಲೆ ಇದೆ. ಅಂತೆಯೇ ಹೊಸಹಳ್ಳಿಗ್ರಾಮದ ಧರ್ಮೇಶ್ವರ ದೇವರ ಸ್ಥಾನಿಕರಾದ ಹರಿಯಪ್ಪ, ಚಿಕ್ಕಣ್ಣ, ಮರಸಯ್ಯ ಅಣ್ಣಪ್ಪಯ್ಯ ಮತ್ತು ಹರಿಯಣ್ಣ ಎಂಬವರು ಕಪ್ಪಯ್ಯ ಪುರುಷ ಎಂಬಾತನಿಗೆ ಕ್ರಿ.ಶ.1562ರಲ್ಲಿ ಕೊಟ್ಟ ಭೂಮಿಯ ದಾಖಲೆಯು ಶಾಸನದಲ್ಲಿ ಕಂಡು ಬರುತ್ತದೆ. ಸಾರ್ವಜನಿಕ ಕಾರ್ಯ ಮಾಡಿದುದರ ಉದ್ದೇಶಕ್ಕೋಸ್ಕರ ಇಂತಹ ದತ್ತಕೊಡಲ್ಪಡುತ್ತಿತ್ತು.

65. ಕೃಷ್ಣದೇವರಾಯನ ಕಾಲದ ಶಿಲಾಶಾಸನ ಒಂದರಲ್ಲಿಯ ಉಲ್ಲೇಖವು ಸ್ಥಾನಿಕರ ಸ್ಥಾನ ಮಾನಗಳನ್ನು ನಿರ್ದೇಶಿಸುವ ಅಂತ್ಯಂತ ಮೌಲ್ಯದ್ದಾಗಿದೆ. ಕ್ರಿ.ಶ. 1519ರಲ್ಲಿ ಪೇರುಮಾಲ್ಕರಯಿವರ್ ಎಂಬ ದೇವಸ್ಥಾನದ ಮೂರು ಸ್ಥಾನಿಕರು ಚಕ್ರವರ್ತಿಗೆ ಮನವಿಯೊಂದನ್ನು ಕೊಂಡು ಹೋದರು. ಈ ಮನವಿಯಲ್ಲಿ ಸರಕಾರದ ಅಧಿಕಾರಿಗಳು ಮಾಡಿದ ಅನ್ಯಾಯವನ್ನು ಕಾಣಿಸಲಾಗಿತ್ತು. ಚಕ್ರವರ್ತಿಯು ಇವರ ಮನವಿಯನ್ನು ಅಂಗೀಕರಿಸಿ, ಆದ ಅನ್ಯಾಯಗಳನ್ನು ಹೋಗಲಾಡಿಸಿ ಪ್ರತಿಯೊಬ್ಬನಿಗೂ ಒಂದು ಹೂಮಾಲೆ, ತಲೆವಸ್ತ್ರ ಒಂದು ಕುದುರೆ ಮತ್ತು ಒಂದು ಛತ್ರಿಯನ್ನು ಬಹುಮಾನವಾಗಿಯೂ, ಗೌರವಾರ್ಥವಾಗಿಯೂ ಕೊಟ್ಟು 900 ಕುಳಿ ಭೂಮಿಯನ್ನು ಸರ್ವಮಾನ್ಯವಾಗಿ ಅವರಿಗಿತ್ತನು.

66. ವಿಜಯನಗರದ ಆಳ್ವಿಕೆ ಕಾಲದಲ್ಲಿ ಸ್ಥಾನಿಕರು ಸರಕಾರದ ಅಧಿಕಾರಿಗಳಾಗಿದ್ದು ರಾಷ್ಟ್ರಕ್ಕೆ ಅಧೀನರಾಗಿದ್ದರು ಎಂಬುದಕ್ಕೆ ಕ್ರಿ.ಶ.1521ರ ಶಾಸನದ ದಾಖಲೆಯು ದೃಷ್ಟಾಂತವಾಗಿದೆ. ಹಾಳುಬಿದ್ದ ಸೋಮೇಶ್ವರ ದೇವಾಲಯವನ್ನು ಜೀರ್ಣೋದ್ಧಾರ ಮಾಡಿದ ನಂತರ ಅದರ ಪೂಜಾದಿ ವಿನಿಯೋಗಗಳನ್ನು ನಡೆಸುವರೆ ಕಾಶ್ಯಪ ಗೋತ್ರದ ಚಂದಪ್ಪಯ್ಯನ ಮಗದಡುಗನನ್ನು ಸ್ಥಾನಿಕನಾಗಿ ವಿಜಯನಗರದ ವೈಸರಾಯನಾದ ಅಣ್ಣದಾನ ಒಡೆಯನ ಅನುಮತಿ ಮೇರೆಗೆ ನೇಮಿಸಲಾಗಿತ್ತು. (ಅನ್ನದಾನ ಒಡೆಯರ ನಿರೋಪವಿದು.)

67. ಕ್ರಿ.ಶ.1523ರ ಶಿಲಾಲೇಖವು ಈ ಕೆಳಗಿನಂತಿದೆ.

''ಏನುಂಟಾದ ಸರ್ವಸ್ವಾಮ್ಯಕೆ ಅರಸುಗಳು ಮತ್ತು ಆರಾದರೂ ಧರ್ಮಕ್ಕೆ ಕೊಟ್ಟಂತೆ ಸೀಮೆಗಳು ಏನುಂಟಾದ ಸರ್ವಸ್ವಾಮ್ಯದವೆಲ್ಲಕ್ಕು ದೇವರ ಸ್ಥಾನಕ್ಕೆ ಕರ್ತನಾದ ಆಲ್ಲಪ್ಪಗೆ ಸಲುವುದು. ದೇವರ ಸೀಮೆ ಎಲ್ಲವನ್ನು ಅನುಭವಿಸಿಕೊಂಡು ದೇವರ ಶ್ರೀಕಾರಕ್ಕೆ (ಕಾರ್ಯಕ್ಕೆ) ತಕ್ಕಂತ ತಮ್ಮ ಮನಸ್ಸು ಬಂದಲ್ಲಿ ಅರ್ಚಕರನ್ನು ಇರಿಸಿಕೊಂಡು ಶ್ರೀಕಾರವನ್ನು ವೇಳೆ ವೇಳೆ ನಡಸಿಕೊಂಡು ಬಹೆನು.'' ಈ ಶಾಸನ ಪ್ರಕಾರ ಪಾರುಪತ್ಯಗಾರನಿಗೆ ದೇವರ ವಿಚಾರವಾಗಿ ಏನೊಂದು ವಿಚಾರಣೆ ನಡೆಸುವ ಅಧಿಕಾರವೂ ಇರಲಿಕ್ಕಿಲ್ಲ. ಸ್ಥಾನಿಕ ಎಲ್ಲಪ್ಪನೇ ದೇವಸ್ಥಾನದ ಸಂಪೂರ್ಣ ಏಜಂಟನಾಗಿದ್ದು ಇತರರಾರಿಗೂ ಅಧಿಕಾರವಿಲ್ಲದುದಾಗಿದೆ. (ಮುಂದುವರಿಯುವುದು)

# ಮುರ ನಿವೇಶನ ಕಟ್ಟಡ ಸಮಿತಿ

## ಶಿವಬ್ರಾಹ್ಮಣ (ಸ್ಥಾನಿಕ) ಸಮಾಜ ಸೇವಾ ಸಂಘ (ರಿ.), ಕಲ್ಲಾರೆ - 574 202, ಪುತ್ತೂರು, ದ.ಕ.

ಪ್ರಿಯರೇ,

ಸುಮಾರು ಎಪ್ಪತ್ತೈದು ವರ್ಷಗಳ ಸುದೀರ್ಘ ಇತಿಹಾಸವಿರುವ ಪುತ್ತೂರಿನ ಶಿವಬ್ರಾಹ್ಮಣ (ಸ್ಥಾನಿಕ) ಸಮಾಜ ಸೇವಾ ಸಂಘವು ಕಾಲದ ಆವಶ್ಯಕತೆಗನುಗುಣವಾಗಿ ಹಲವಾರು ಉಪಯುಕ್ತ ಸಮಾಜಮುಖೀ ಕಾರ್ಯಕ್ರಮಗಳೊಂದಿಗೆ ತನ್ನ ಚಟುವಟಿಕೆಗಳ ವ್ಯಾಪ್ತಿಯನ್ನು ವಿಸ್ತರಿಸುತ್ತಾ ಬಂದಿದೆ. ಇವುಗಳಲ್ಲಿ ಪುತ್ತೂರಿನ ಸಮೀಪದ ಕಬಕ ಗ್ರಾಮದ ಮುರ ಎಂಬಲ್ಲಿ ಹೆದ್ದಾರಿಯ ಪಕ್ಕದಲ್ಲೇ 0.43 ಎಕ್ರೆ ಜಮೀನನ್ನು ಪಡೆದಿರುವುದು ಒಂದು ಮಹತ್ವದ ಮೈಲಿಗಲ್ಲು. 1973ರಷ್ಟು ಹಿಂದೆಯೇ ಇದನ್ನು ಪಡೆಯಲಾಗಿ ತಾದರೂ ಅಲ್ಲೊಂದು ಕಟ್ಟಡವನ್ನು ಕಟ್ಟುವ ನಮ್ಮವರ ಕನಸು ನನಸಾಗುವ ಪ್ರಕ್ರಿಯೆ ಇದೀಗ ಪ್ರಾರಂಭವಾಗಿದೆ. ಭವ್ಯವಾದ ಹಾಸ್ಟೆಲ್ ಕಟ್ಟಡ ವನ್ನು ಕಟ್ಟುವ ಯೋಜನೆಯು ಈಗಾಗಲೇ ಕಾರ್ಯರೂಪಕ್ಕೆ ಬಂದಿದ್ದು, ದಾಖಲೆ ವೇಗದಲ್ಲಿ ಕಾಮಗಾರಿಗಳು ನಡೆಯುತ್ತಿದ್ದು, ನೆಲ ಅಂತಸಿನ ಕೆಲಸಗಳನ್ನು ಪೂರ್ಣಗೊಳಿಸಿ ಕಳೆದ ಮೇ 18ರಂದು ಗಣಹೋಮ, ವಾಸ್ತು ಪೂಜಾದಿಗಳನ್ನು ನೆರವೇರಿಸಿ ಪ್ರವೇಶೋತ್ಸವ ವನ್ನೂ ಕೈಗೊಳ್ಳಲಾಗಿದೆ.

'ವಿದ್ಯೆಯ ಮೂಲಕ ಸಮಾಜದ ಉನ್ನತಿ' ಎಂಬುದು ನಮ್ಮ ಸಂಘದ ಧ್ಯೇಯವಾಕ್ಯವಾಗಿದ್ದು ಅದಕ್ಕಾಗಿಯೇ ಸಂಘದಿಂದ ವಿದ್ಯಾವರ್ಧಕ ವೇದಿಕೆಯೊಂದನ್ನು ರೂಪಿಸಿ, ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ, ಧನಸಹಾಯಗಳನ್ನು ನೀಡುತ್ತಾ ಬರಲಾಗುತ್ತಿದೆ. ಇದಕ್ಕಾಗಿ ಹಲವಾರು ಬಂಧುಗಳು ಸಂಘದಲ್ಲಿ ದತ್ತಿನಿಧಿಗಳನ್ನು ಸ್ಥಾಪಿಸಿ ಸಹಕಾರ ನೀಡಿದರೆ, ಹಲವರು ಉದಾರ ದೇಣಿಗೆಯನ್ನು ನೀಡುತ್ತಾ ಬಂದಿದ್ದಾರೆ. ವಿದ್ಯೆಗೆ ಹೆಚ್ಚಿನ ಪ್ರೋತ್ಸಾಹ ನೀಡಬೇಕೆಂಬ ಸದಿಚ್ಛೆಯ ಮುಂದುವರಿಕೆಯಾಗಿ ಇದೀಗ ಹಾಸ್ಟೆಲ್‌ನ ಯೋಜನೆಯನ್ನು ಕೈಗೆತ್ತಿಗೊಳ್ಳಲಾಗಿದೆ. ಪುತ್ತೂರು ವೇಗವಾಗಿ ಬೆಳೆಯುತ್ತಿರುವ ನಗರವಾಗಿದ್ದು ನಮ್ಮ ಹಾಸ್ಟೆಲ್ ಕಟ್ಟಡದ ಕೇವಲ ಒಂದು ಕಿ.ಮೀ. ವ್ಯಾಪ್ತಿಯಲ್ಲೇ ಪುತ್ತೂರು ವಿವೇಕಾನಂದ ವಿದ್ಯಾವರ್ಧಕ ಸಂಘದಿಂದ ನಡೆಸಲ್ಪಡುವ ವಿವೇಕಾನಂದ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ವಿವೇಕಾನಂದ ಪದವಿಪೂರ್ವ ಕಾಲೇಜು, ವಿವೇಕಾನಂದ ಕಾನೂನು ಮಹಾವಿದ್ಯಾಲಯ, ವಿವೇಕಾನಂದ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಕಾಲೇಜು, ವಿವೇಕಾನಂದ ಪಾಲಿಟೆಕ್ನಿಕ್, ವಿವೇಕಾನಂದ ಕಾಲೇಜ್ ಆಫ್ ಎಜ್ಯುಕೇಶನ್ (ಬಿ.ಎಡ್.), ವಿವೇಕಾನಂದ ಶಿಕ್ಷಕ ತರಬೇತಿ ಸಂಸ್ಥೆ– ಹೀಗೆ 7 ವಿದ್ಯಾಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದು 6 ಸಾವಿರಕ್ಕಿಂತಲೂ ಹೆಚ್ಚು ಮಂದಿ ವಿದ್ಯಾರ್ಥಿಗಳು ಈ ಸಂಸ್ಥೆಗಳಲ್ಲಿ ವ್ಯಾಸಂಗವನ್ನು ನಡೆಸುತ್ತಿದ್ದಾರೆ. ಈ ಪೈಕಿ ನಮ್ಮ ಸಮಾಜದ ಹಲವಾರು ವಿದ್ಯಾರ್ಥಿಗಳೂ ವ್ಯಾಸಂಗ ಮಾಡುತ್ತಿದ್ದು ಈ ವಿದ್ಯಾರ್ಥಿಗಳು ಈ ಯೋಜನೆಯ ವಿಶೇಷ ಫಲಾನುಭವಿಗಳಾಗಬೇಕು ಎಂಬುದು ನಮ್ಮ ಯೋಜನೆಯ ಮೂಲ ಉದ್ದೇಶ.

**ಹಾಸ್ಟೆಲ್ ಕಟ್ಟಡ :**

ಸುಮಾರು 25,000 ಚದರ ಅಡಿಯ, ನಾಲ್ಕು ಅಂತಸ್ತುಗಳ ಈ ಕಟ್ಟಡಕ್ಕೆ ಈಗಿನ ಅಂದಾಜು ವೆಚ್ಚ ಸುಮಾರು ಎರಡು ಕೋಟಿ ರೂಪಾಯಿಗಳು. ನೆಲ ಅಂತಸು ಮತ್ತು ಮೇಲಿನ ಮೂರು ಮಹಡಿಗಳಲ್ಲಿ ವಿದ್ಯಾರ್ಥಿ ವಸತಿ ಕೋಣೆಗಳು ಮತ್ತು ನಾಲ್ಕನೆಯ ಮಹಡಿಯಲ್ಲಿ ವಿದ್ಯಾರ್ಥಿಗಳ ಆಧುನಿಕ ಜೀವನ ಪದ್ಧತಿಗೆ ಅನುಕೂಲವಾಗುವಂತೆ ಜಿಮ್ ವ್ಯವಸ್ಥೆ, ವಾಚನಾಲಯ, ಧ್ಯಾನಮಂದಿರ ಮುಂತಾದವನ್ನು ನಿರ್ಮಿಸುವ ಯೋಜನೆಯು ನಮ್ಮ ಮುಂದಿದೆ. ಈ ಸಮುಚ್ಚದಲ್ಲಿಯೇ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಬ್ಯಾಂಕಿಂಗ್ ವ್ಯವಸ್ಥೆ ಮತ್ತು ವಿಶಾಲವಾದ ವಾಹನ ನಿಲುಗಡೆ (Parking Place) ಇರುವುದು ಈ ಯೋಜನೆಯ ಇನ್ನೊಂದು ವೈಶಿಷ್ಟ್ಯವಾಗಿದೆ. ಕಟ್ಟಡ ಪೂರ್ಣಗೊಂಡಾಗ ಸುಮಾರು 200 ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲು ಸಾಧ್ಯವಾಗಬಹುದು. ಪ್ರತೀ ಕೊಠಡಿಯಲ್ಲಿ ಪ್ರತ್ಯೇಕವಾದ ಶೌಚಾಲಯ ವ್ಯವಸ್ಥೆಯನ್ನು ಕಲ್ಪಿಸಲಾಗಿದ್ದು, ನೆಲ ಅಂತಸ್ತಿನಲ್ಲಿ ವಿಶಾಲವಾದ ಅಡುಗೆ ಕೋಣೆ ಮತ್ತು ಭೋಜನಾಲಯಗಳಿರುವುದು. ಶುಚಿರುಚಿಯಾದ ಸಸ್ಯಾಹಾರಿ ಆಹಾರ ವ್ಯವಸ್ಥೆಯನ್ನು ಮಾಡಲಾಗುವುದು.

ನಗರದ ಸದ್ದುಗದ್ದಲಗಳಿಂದ ಹೊರಗಿದ್ದು, ವಿವೇಕಾನಂದ ವಿದ್ಯಾಸಂಸ್ಥೆಗಳಿಗೆ ತೀರಾ ಹತ್ತಿರವೂ ಆಗಿರುವುದರಿಂದ ವಿದ್ಯಾರ್ಥಿಗಳಿಗೆ ಈ ಹಾಸ್ಟೆಲ್ ಹೆಚ್ಚು ಉಪಯುಕ್ತವಾಗಬಹುದು. ಪುತ್ತೂರಿನಲ್ಲಿ ಸದ್ಯದಲ್ಲೇಯೇ ನಿರ್ಮಾಣಗೊಳ್ಳಲಿರುವ ಚತುಷ್ಪಥ ರಸ್ತೆಯೂ ಮುರದಿಂದಲೇ ಪ್ರಾರಂಭವಾಗಲಿದ್ದು, ಹಾಸ್ಟೆಲ್ ಎದುರಿನ ಮಾಣಿ–ಮೈಸೂರು ರಾಜ್ಯ ಹೆದ್ದಾರಿಯೂ ಸದ್ಯದಲ್ಲಿಯೇ ರಾಷ್ಟ್ರೀಯ ಹೆದ್ದಾರಿಯಾಗಿ ಪರಿವರ್ತನೆಯಾಗಲಿದೆ. ಈ ಎಲ್ಲ ಹಿನ್ನೆಲೆಯಲ್ಲಿ ಈ ಹಾಸ್ಟೆಲ್ ಅತ್ಯಂತ ಅನುಕೂಲವಾದ ಒಂದು ಯೋಜನೆಯಾಗಲಿದೆ. 2011-12ನೇ ಶೈಕ್ಷಣಿಕ ವರ್ಷದಲ್ಲೇ ನೆಲ ಅಂತಸಿನಲ್ಲಿ ಮತ್ತು ಪ್ರಥಮ ಮಹಡಿಯಲ್ಲಿ ಸುಮಾರು 60 ವಿದ್ಯಾರ್ಥಿಗಳಿಗೆ ಪ್ರವೇಶವನ್ನು ನೀಡಲಾಗುವುದು.

ಇದೊಂದು ವಿದ್ಯಾಸ್ನೇಹಿ ಯೋಜನೆಯೇ ಹೊರತು ಇನ್ನಾವುದೇ ಆರ್ಥಿಕ ಲಾಭದ ಉದ್ದೇಶ ಸಂಘಕ್ಕಿಲ್ಲ ಎನ್ನುವುದನ್ನು ಈ ಮೂಲಕ ಸ್ಪಷ್ಟಪಡಿಸಲಾಗಿದೆ. ಸಂಘವು ಪಡಕೊಂಡ ಸಾಲಗಳೆಲ್ಲ ಮುಗಿದ ಬಳಿಕ ಈ ಹಾಸ್ಟೆಲ್‌ನಿಂದ ದೊರೆಯುವ ಎಲ್ಲ ಉಳಿತಾಯದ ಹಣವನ್ನು ವಿದ್ಯಾರ್ಥಿ ಸಹಾಯನಿಧಿಗೆ ಬಳಕೆ ಮಾಡಬೇಕೆಂಬುದು ನಮ್ಮ ಉದ್ದೇಶ. ನಮ್ಮ ಮುಂದಿನ ಜನಾಂಗದ ಉನ್ನತಿಗೆ ನಾವು ಸಲ್ಲಿಸುವ ಸೇವೆ ಎಂಬ ಭಾವದಿಂದ ಎಲ್ಲರೂ ಈ ಮಹತ್ಕಾರ್ಯದಲ್ಲಿ ಕೈ ಜೋಡಿಸಬೇಕೆಂದು ವಿನಮ್ರವಾಗಿ ವಿನಂತಿಸುತ್ತೇವೆ.

ತಾವು ಬಿಡುವು ಮಾಡಿಕೊಂಡು ಪುತ್ತೂರಿನ ಮುರ ನಿವೇಶನದಲ್ಲಿ ನಡೆಯುತ್ತಿರುವ ಕಾಮಗಾರಿಗಳನ್ನು ಸ್ವತಃ ವೀಕ್ಷಿಸಬೇಕೆಂದು ನಮ್ರವಿನಂತಿ

**ಎನ್.ಕೆ.ಜಗನ್ನಿವಾಸ ರಾವ್**
ಅಧ್ಯಕ್ಷರು, ಶಿವಬ್ರಾಹ್ಮಣ (ಸ್ಥಾನಿಕ) ಸಮಾಜ ಸೇವಾ ಸಂಘ (ರಿ.)

**ಎಂ.ಎಸ್.ರಘುನಾಥ ರಾವ್**
ಅಧ್ಯಕ್ಷರು, ಮುರ ನಿವೇಶನ ಅಭಿವೃದ್ಧಿ ಸಮಿತಿ

**ಕರುಣ್‌ರಾವ್ ಬೆಳ್ಳೆ**
ಸಂಚಾಲಕರು, ಮುರ ನಿವೇಶನ ಕಟ್ಟಡ ಸಮಿತಿ

ಮತ್ತು **ಆಡಳಿತ ಮಂಡಳಿ ಸದಸ್ಯರು**

## ಈ ಯೋಜನೆಯಲ್ಲಿ ನೀವು ಹೇಗೆ ಪಾಲ್ಗೊಳ್ಳಬಹುದು?

**ನಮ್ಮ ಸಮಾಜದ ಎಲ್ಲ ಬಂಧುಗಳೂ ಈ ಯೋಜನೆಯಲ್ಲಿ ತೊಡಗಿಸಿಕೊಳ್ಳಬೇಕೆಂದು ನಮ್ಮ ಅಪೇಕ್ಷೆ. ಪ್ರತಿಯೊಬ್ಬರೂ ಅವರವರ ಶಕ್ತ್ಯಾನುಸಾರವಾಗಿ ಪಾಲ್ಗೊಳ್ಳಲು ಸಾಧ್ಯವಾಗುವಂತೆ ಈ ಕೆಳಗಿನ ಅವಕಾಶಗಳನ್ನು ಒದಗಿಸಲಾಗಿದೆ.**

- ರೂ.5 ಲಕ್ಷ ಅಥವಾ ಅದಕ್ಕಿಂತ ಹೆಚ್ಚಿನ ದೇಣಿಗೆ ನೀಡುವವರನ್ನು ಮಹಾದಾನಿಗಳೆಂದು ಗುರುತಿಸಿ ಅವರ ಹೆಸರನ್ನು (ಅಥವಾ ಅವರು ಸೂಚಿಸುವವರ ಹೆಸರನ್ನು) ಕಟ್ಟಡದ ಒಂದು ಅಂತಸ್ತಿಗೆ ನಾಮಕರಣ ಮಾಡಿ ಭಾವಚಿತ್ರ ಸಮೇತವಾಗಿ ಶಾಶ್ವತವಾಗಿ ದಾಖಲು ಮಾಡುವುದು.
- ರೂ.2 ಲಕ್ಷ ಅಥವಾ ಅದಕ್ಕಿಂತ ಹೆಚ್ಚಿನ ದೇಣಿಗೆ ನೀಡುವವರ ಮಾತಾ–ಪಿತೃಗಳ (ಅಥವಾ ಅವರು ಸೂಚಿಸುವವರ) ಭಾವಚಿತ್ರವನ್ನು ಕೋಣೆಯೊಂದರಲ್ಲಿ ಇರಿಸುವುದು, ಶಾಶ್ವತ ನಾಮಫಲಕ ಮತ್ತು ಅವರು ಸೂಚಿಸುವ ಓರ್ವ ವಿದ್ಯಾರ್ಥಿಗೆ 4 ವರ್ಷಗಳ ವರೆಗೆ ಹಾಸ್ಟೆಲ್ ಬಾಡಿಗೆ ಉಚಿತ ಎಂದು ಪರಿಗಣಿಸುವುದು.
- ರೂ.1 ಲಕ್ಷ ಅಥವಾ ಅದಕ್ಕಿಂತ ಹೆಚ್ಚಿನ ದೇಣಿಗೆ ನೀಡಿದವರ ಮಾತಾ–ಪಿತೃಗಳ (ಅಥವಾ ಅವರು ಸೂಚಿಸುವವರ) ಭಾವಚಿತ್ರ ಅನಾವರಣ, ಶಾಶ್ವತ ನಾಮಫಲಕ ಮತ್ತು ಅವರು ಸೂಚಿಸುವ ಓರ್ವ ವಿದ್ಯಾರ್ಥಿಗೆ 2 ವರ್ಷಗಳ ವರೆಗೆ ಹಾಸ್ಟೆಲ್ ಬಾಡಿಗೆ ಉಚಿತ ಎಂದು ಪರಿಗಣಿಸುವುದು.
- ರೂ.50 ಸಾವಿರ ಮತ್ತು ಅದಕ್ಕಿಂತ ಹೆಚ್ಚಿನ ದೇಣಿಗೆ ನೀಡುವವರ ಮಾತಾ–ಪಿತೃಗಳ (ಅಥವಾ ಅವರು ಸೂಚಿಸುವವರ) ಭಾವಚಿತ್ರ ಅನಾವರಣ ಮತ್ತು ಶಿಲಾಫಲಕದಲ್ಲಿ ಹೆಸರು ದಾಖಲಿಸುವುದು.
- ರೂ.25 ಸಾವಿರ ಮತ್ತು ಅದಕ್ಕಿಂತ ಹೆಚ್ಚು ದೇಣಿಗೆ ನೀಡಿದವರ ಮಾತಾ–ಪಿತೃಗಳಲ್ಲಿ ಯಾರಾದರೂ ಒಬ್ಬರ (ಅಥವಾ ಅವರು ಸೂಚಿಸುವ ಒಬ್ಬರ) ಭಾವಚಿತ್ರ ಅನಾವರಣ ಮತ್ತು ಶಿಲಾಫಲಕದಲ್ಲಿ ಹೆಸರು ದಾಖಲಿಸುವುದು.

ಈ ಮೇಲಿನ ಯಾವುದಾದರೂ ಒಂದು ರೀತಿಯ ತೊಡಗಿಸಿಕೊಳ್ಳುವಿಕೆಯನ್ನು ಸಮಾಜ ಬಾಂಧವರಿಂದ ಅಪೇಕ್ಷಿಸುತ್ತಿದ್ದೇವೆ. ಇದಲ್ಲದೆ ಬೇರಾವುದೇ ರೀತಿಯ ದೇಣಿಗೆಯನ್ನೂ ಕೃತಜ್ಞತಾಪೂರ್ವಕವಾಗಿ ಸ್ವೀಕರಿಸಲಾಗುವುದು. ತಾವು ನೀಡುವ ದೇಣಿಗೆಗೆ ಆದಾಯ ತೆರಿಗೆ (80G) ಪ್ರಕಾರ ವಿನಾಯಿತಿಗೆ ವ್ಯವಸ್ಥೆ ಮಾಡಲಾಗುವುದು.

ತಾವು ತಮ್ಮ ದೇಣಿಗೆಯನ್ನು ಮಾಸಿಕ ಕಂತಿನ ರೂಪದಲ್ಲೂ ನೀಡಬಹುದು. Recurring Deposit ಠೇವಣಿಯ ರೂಪದಲ್ಲಿ ಪಾವತಿಸಲೂ ಅನುಕೂಲ ಮಾಡಿಕೊಡಲಾಗುವುದು.

**ಕವನ**

## ಮಗಳಿಗೆ

ಬಾ ಮಗಳೆ ಇನಷ್ಟು ಹತಿರ
ದಿನವೂ ಒಂದಿಷ್ಟು ಹೊತ್ತು
ಹೀಗೇ ನನ್ನ ಬಳಿ ಕುಳಿತಿರು
ದೂರ ಹೋಗಬೇಕಾದವಳು
ಹಿಡಿದುಕೊಳ್ಳುತ್ತೇನೆ ನಿನ್ನ ಕರ
ನಾಳೆ ಯಾರೋ ಏನೋ
ಇದರ ವಾರಸುದಾರ?

ಬೇಕೆನಿಸಿದಾಗಲೆಲ್ಲ
ನಿನ್ನ ಬಾ ಅನ್ನುವಂತಿಲ್ಲ
ನೀನು ಬರುವಂತೆಯೂ ಇಲ್ಲ
ಹೌದು ನೀನು ನನ್ನ ಮಗಳೆ
ಜೊತೆಗೆ ಅವನವಳು ಎನ್ನುವ
ಪರಿಜ್ಞಾನವೂ ಇರಬೇಕಲ್ಲ?

ಕೊಟ್ಟ ಹೆಣ್ಣು ಕುಲದಿಂದ ಹೊರಗೆ
ಎಂದೇನು ನಾನು ಭಾವಿಸುವುದಿಲ್ಲ
ಗೋತ್ರ, ಸೂತ್ರ ಕಡಿದ ಮಾತ್ರಕ್ಕೆ
ಪರಕೀಯಳಾಗುವುದಿಲ್ಲ
ತವರಲ್ಲಿ ಯಾವ ಪಾತ್ರವೂ ಇಲ್ಲ
ಎಂದಿದರ ಅರ್ಥವೂ ಇಲ್ಲ

ನಿನಗೂ ತಿಳಿಯದ್ದೇನಲ್ಲ
ಎಲ್ಲರಂತೆ ಅಪ್ಪನಿಗೆ
ಮುದ್ದಿಸಲು ಬರುವುದಿಲ್ಲ
ಏನಿದ್ದರೂ ಹೃದಯ ತುಂಬಿ
ನಾಲ್ಕು ಮಾತು, ಆತ್ಮೀಯ ಅಪ್ಪುಗೆ
ಮೆಚ್ಚುಗೆಯ ನಗೆ
ಇಷ್ಟರಲ್ಲೇ ಮುಗಿದು ಹೋಯಿತು.
ಯಾಕಾಗಬಾರದು ಮಗಳೆ
ಈ ಪ್ರೀತಿ ನಿನ್ನ ಪಾಲಿಗೆ
ಸಿಹಿ ಬುತ್ತಿ ಸಂಪತ್ತು?

ಇರು ಮಗಳೆ ಮಗುವಲ್ಲಲ್ಲೆ
ಒತ್ತಿ ಇನ್ನಷ್ಟು ಹೊತ್ತು
ಭವಿಷ್ಯ ಹೇಗೋ ಏನೋ?
ನಮಗೇನು ಗೊತ್ತು?

ಸಂಗ್ರಹ : M.N.S.

**ನಿಧನ**


### ಶ್ರೀಮತಿ ಪಿ. ಮೀರಾ

ದಿ। ಡಾ। ಪಿ. ಸದಾಶಿವ ರಾಯರ ಧರ್ಮಪತ್ನಿ ಶ್ರೀಮತಿ ಪಿ. ಮೀರಾರವರು ತಾ.09-07-2011 ರಂದು ಮೈಸೂರಿನಲ್ಲಿರುವ ತನ್ನ ಮಗ ಕೃಷ್ಣ ಪ್ರಸಾದ್‌ರ ಮನೆಯಲ್ಲಿ ತಮ್ಮ 73ನೇ ವರ್ಷ ವಯಸ್ಸಿನಲ್ಲಿ ಅಸ್ವಾಸ್ಥದಿಂದ ನಿಧನರಾದರು. ದಿವಂಗತರು ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.

### ಸಿಂಹ ಮಾಸ ವಿಶೇಷ ದಿನಗಳು

| | |
|---|---|
| 17-08-2011 | ಸಿಂಹ ಸಂಕ್ರಮಣ |
| | ಮಹಾನಕ್ಷತ್ರಾರಂಭ |
| | ಸಂಕಷ್ಟಹರ ಚತುರ್ಥಿ |
| | ಚಂದ್ರೋದಯ ಘಂಟೆ ರಾತ್ರಿ 9-14 |
| 21-08-2011 | ಶ್ರೀಕೃಷ್ಣ ಜನ್ಮಾಷ್ಟಮಿ |
| 25-08-2011 | ಸರ್ವೈಕಾದಶೀ |
| 26-08-2011 | ಪ್ರದೋಷಃ, |
| 29-08-2011 | ಅಮಾವಾಸ್ಯಾ |
| 31-08-2011 | ಗೌರೀ ತೃತೀಯಾ |
| | ಹುಬ್ಬಾ ನಕ್ಷತ್ರಾರಂಭ |
| 01-09-2011 | ಗಣೇಶ ಚತುರ್ಥಿ |
| 08-09-2011 | ಸರ್ವೈಕಾದಶೀ |
| 09-09-2011 | ಪ್ರದೋಷಃ |
| | ಋಗುಪಾಕರ್ಮ |
| 11-09-2011 | ಅನಂತನವ್ರತ |
| 12-09-2011 | ಪೂರ್ಣಿಮಾ |
| 13-09-2011 | ಮಹಾಲಯಾರಂಭ |
| | ಉತ್ತರಾ ನಕ್ಷತ್ರಾರಂಭ |
| 16-09-2011 | ಸಂಕಷ್ಟಹರ ಚತುರ್ಥಿ |
| | ಚಂದ್ರೋದಯ ಘಂಟೆ ರಾತ್ರಿ 9-08 |
| 17-09-2011 | ಕನ್ಯಾ ಸಂಕ್ರಮಣ |

**ಅಭಿನಂದನೆ**



## ವೈಶಾಲಿ ಶರ್ಮ ಯಂ.

ವೈಶಾಲಿ ಶರ್ಮ ಯಂ. ಅವರು ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ವಸ್ತುವಿಜ್ಞಾನ (Material Science) ದಲ್ಲಿ ಸ್ನಾತಕೋತ್ತರ ಪದವಿ (M.Sc.) ಯನ್ನು ಉನ್ನತ ಶ್ರೇಣಿಯೊಂದಿಗೆ ಪಡೆದು ದೇಶದ ಪ್ರತಿಷ್ಠಿತ Indian Institute of Science ನಲ್ಲಿ ಸಂಶೋಧನಾ ವಿದ್ಯಾರ್ಥಿಯಾಗಿ (Research Student) ಆಯ್ಕೆಯಾಗಿರುತ್ತಾರೆ.

ಇವರು ಪುತ್ತೂರಿನ ಕೀರ್ತಿಶೇಷ ಮಡಿಯಾಲ ವಿಷ್ಣುಶರ್ಮ ಮತ್ತು ಶ್ರೀಮತಿ ರತ್ನ ಯಂ.ವಿ. ಅವರ ಮೊಮ್ಮಗಳಾಗಿದ್ದು ದಿ। ಉದಯ ಕುಮಾರ್ ಮತ್ತು ಶ್ರೀಮತಿ ಅನ್ನಪೂರ್ಣ ಅವರ ಸುಪುತ್ರಿ.

ಇವರಿಗೆ ಶ್ರೀಶಾರದಾ ಉಜ್ವಲ ಭವಿಷ್ಯವನ್ನು ಹಾರೈಸುತ್ತದೆ.

## ಶುಭ ಜನನ

ದಿ। ಡಾ। ಪಡುಬಿದ್ರಿ ಸದಾಶಿವ ರಾಯರ ಪುತ್ರ ಪ್ರಸಕ್ತ ಮೈಸೂರಿನಲ್ಲಿ ನೆಲೆಸಿರುವ ಶ್ರೀ ಕೃಷ್ಣಪ್ರಸಾದ್ ಹಾಗೂ ದೀಪಾ ದಂಪತಿಗಳಿಗೆ ತಾ.04-06-2011 ರಂದು ಗಂಡು ಮಗುವಿನ ಜನನ

## ಗೃಹಪ್ರವೇಶ

ಶ್ರೀಮತಿ ಪದ್ಮಾವತಿ ಮತ್ತು ಶ್ರೀ ಗೋಪಾಲ ಕೃಷ್ಣ ರಾವ್ ಮತ್ತು ಮಕ್ಕಳು ಉಡುಪಿಯ ಮಾರ್ಪಳ್ಳಿಯಲ್ಲಿ ನೂತನವಾಗಿ ನಿರ್ಮಿಸಿದ ಗೃಹ 'ಶ್ರೀಕೃಷ್ಣ ನಿಲಯ' ಇದರ ಪ್ರವೇಶೋತ್ಸವವನ್ನು ತಾ.24-6-2011ರಂದು ನೆರವೇರಿಸಿದರು.

**ಚುಟುಕಗಳು**

### ಪ್ರೀತಿ ಚೆಲ್ಲಿತು ಬೆಳಕು

ಆಗ ಮನಸು ತುಂಬಾ ಕತ್ತಲು,
ಅವಳು ನನ್ನ ಕೈಹಿಡಿದು ಎತ್ತಲು,
ಮತ್ತೆ ಅವಳು ನನ್ನ ಮುತ್ತಲು,
ಪ್ರೀತಿ ಚೆಲ್ಲಿತು ಬೆಳಕು ನನ್ನ ಸುತ್ತಲು.

### ಹುಡುಗ-ಹುಡುಗಿ

ಕೈಯಲ್ಲಿ ಇದ್ದರೆ ಮೊಬೈಲು
ಅವಳ ಮುಖದಲ್ಲಿ ಸ್ಮೈಲು
ಬಿಡುತ್ತಾರೆ ಫೋನಲ್ಲಿ ಏನು ರೈಲು !
ಇದುವೇ ಲೇಟೆಸ್ಟು ಸ್ಟೈಲು

ವೈ. ಎ. ರಾವ್, ಉಡುಪಿ

## ಶುಭ ವಿವಾಹ

ಶ್ರೀಯುತ ತಾಳಿಪ್ಪಾಡಿ ಕೃಷ್ಣಾನಂದ ರಾಯರ ಪುತ್ರ **ಪ್ರವೀಣ್‌ಕುಮಾರ್** ಹಾಗೂ ಶ್ರೀಮತಿ ಮತ್ತು ಶ್ರೀ ಪೊಳಲಿ ರಘುವೀರರಾಯರ ಪುತ್ರಿ **ರಂಜಿತಾ** ಇವರ ವಿವಾಹವು ತಾ.15-7-2011ರಂದು ಎರ್ಮಾಳು ಜನಾರ್ದನ ದೇವಸ್ಥಾನದ ಕಲ್ಯಾಣ ಮಂಟಪದಲ್ಲಿ ನೆರವೇರಿತು.

**ಕುಮಾರವ್ಯಾಸ ಭಾರತ**

ಚೋರ ನಿಂದಿಸಿ ಶಶಿಯ ಬೈದಡೆ
ಕ್ಷೀರವನು ಕ್ಷಯರೋಗಿ ಹಳಿದರೆ
ವಾರಣಾಸಿಯ ಹೆಳವ ನಿಂದಿಸಿ ನಕ್ಕರೇನಹುದು
ಭಾರತದ ಕಥನ ಪ್ರಸಂಗವ
ಕ್ರೂರಕರ್ಮಿಗಳೆತ್ತ ಬಲ್ಲರು
ಘೋರರೌರವವನ್ನು ಕೆಡಿಸುಗೆ ಕೇಳ್ದ ಸಜ್ಜನರ.

## ವೈದ್ಯಕೀಯ ವೇದಿಕೆ-ಪ್ರಶ್ನೆ ಮತ್ತು ಉತ್ತರ

ಡಾ. ವೈ. ಸುದರ್ಶನ ರಾವ್

**ಪ್ರಶ್ನೆ: ರಕ್ತದಲ್ಲಿ ಗ್ಲುಕೋಸ್ ಕಡಿಮೆಯಾಗುವುದು (hypoglycaemia) ಎಂದರೇನು? ಇದರ ಕಾರಣಗಳೇನು? ಇದರ ಚಿಕಿತ್ಸೆ ಹೇಗೆ?**

**ಉತ್ತರ :** ನಾವು ತಿಂದ ಆಹಾರವು ಕರುಳಿನಲ್ಲಿ ಪಚನವಾದ ಮೇಲೆ ಗ್ಲುಕೋಸ್, ಅಮೈನೋ ಆಸಿಡ್ಸ್ ಹಾಗೂ ಫ್ಯಾಟಿ ಆಸಿಡ್ಸ್ ಎಂಬ ಮೂರು ನಮೂನೆಯ ಪದಾರ್ಥಗಳ ರೂಪದಲ್ಲಿ ರಕ್ತವನ್ನು ಸೇರುತ್ತದೆ. ಅವುಗಳಲ್ಲಿ ಗ್ಲುಕೋಸ್ ಶಕ್ತಿಯ ಇಂಧನವಾಗಿಯೂ, ಅಮೈನೋಆಸಿಡ್ಸ್ ಮತ್ತು ಫ್ಯಾಟ್ಟೀ ಆಸಿಡ್‌ಗಳು ದೇಹದ ಬೆಳವಣಿಗೆಗೂ ಬಳಕೆಯಾಗುತ್ತವೆ. ಗ್ಲುಕೋಸನ್ನು ಇಂಧನವಾಗಿ ಬಳಸಿಕೊಳ್ಳಲು ಜೀವಕೋಶಗಳಿಗೆ ಇನ್ಸುಲಿನ್ ಎಂಬ ಹಾರ್ಮೋನ್ ಮಧ್ಯವರ್ತಿಯಾಗಿ ಕೆಲಸ ಮಾಡುತ್ತದೆ. ಈ ಹಾರ್ಮೋನ್ ಮೇದೋಜೀರಕ ಗ್ರಂಥಿ (pancreas) ಎಂಬ ಹೊಟ್ಟೆಯೊಳಗೆ ಇರುವ ಅಂಗವೊಂದರಲ್ಲಿ ತಯಾರಾಗಿ ರಕ್ತಕ್ಕೆ ಬಿಡುಗಡೆಯಾಗುತ್ತದೆ. ಈ ಇನ್ಸುಲಿನ್ ಜೀವಕೋಶಗಳಿಗೆ ರಕ್ತದಲ್ಲಿರುವ ಗ್ಲುಕೋಸನ್ನು ಬಳಸಲು ಸಹಾಯ ಮಾಡುವುದರ ಜೊತೆಗೆ ರಕ್ತದಲ್ಲಿ ಹೆಚ್ಚಿಗೆ ಇರುವ ಗ್ಲುಕೋಸನ್ನು ಪಿತ್ತಜನಕಾಂಗ (liver)ದೊಳಗೆ ಗ್ಲೈಕೋಜನ್ ಎಂಬ ರೂಪದಲ್ಲಿ ತೆಗೆದಿಡುತ್ತದೆ. ರಕ್ತದಲ್ಲಿ ಸಾಧಾರಣ 120mg ನಷ್ಟು ಗ್ಲುಕೋಸ್‌ನ ಪ್ರಮಾಣ ಇರುವ ರೀತಿಯಲ್ಲಿ ಇನ್ಸುಲಿನ್‌ನನ್ನು ಮೇದೋಜೀರಕ ಗ್ರಂಥಿಯು ರಕ್ತಕ್ಕೆ ಬಿಡುಗಡೆ ಮಾಡುತ್ತದೆ. ಒಂದು ವೇಳೆ ರಕ್ತದಲ್ಲಿ ಗ್ಲುಕೋಸ್ ಹೆಚ್ಚಿದ್ದರೆ ಅದು ಹೆಚ್ಚು ಪ್ರಮಾಣದಲ್ಲಿ ಬಿಡುಗಡೆಯಾಗುತ್ತದೆ. ಈ ರೀತಿ ಇನ್ಸುಲಿನ್ ಬಿಡುಗಡೆ ಆಗಬೇಕಾದ ಪ್ರಮಾಣವನ್ನು ನಿರ್ಧರಿಸುವುದು ಮೆದುಳು. ಮೆದುಳಿನಲ್ಲಿ ರಕ್ತದ ಗ್ಲುಕೋಸ್‌ನ ಮಟ್ಟವನ್ನು ಕ್ಷಣ ಕ್ಷಣಕ್ಕೂ ಅಳೆದು ಪ್ರತೀ ಕ್ಷಣದಲ್ಲಿ ಬಿಡುಗಡೆಯಾಗಬೇಕಾದ ಇನ್ಸುಲಿನ್‌ನ ಪ್ರಮಾಣವನ್ನು ನಿರ್ಧರಿಸಿ, ಮೇದೋಜೀರಕ ಗ್ರಂಥಿಗೆ ಸಂದೇಶವನ್ನು ಕಳುಹಿಸಿ, ಇನ್ಸುಲಿನ್ ಬಿಡುಗಡೆಯಾಗುವುದು ಮಾತ್ರವಲ್ಲ ರಕ್ತದಲ್ಲಿ ಗ್ಲುಕೋಸ್ ಮಟ್ಟವನ್ನು ಕಾಪಾಡಿಕೊಂಡು ಬರುವಂತಹಾ ಕೇಂದ್ರವಿದೆ.

ಮಧುಮೇಹಿಗಳಲ್ಲಿ ಮೇದೋಜೀರಕ ಗ್ರಂಥಿಯಲ್ಲಿ ಇನ್ಸುಲಿನ್ ಸಾಕಷ್ಟು ತಯಾರಾಗದೆ ಇರುವುದರಿಂದ ಅವರಲ್ಲಿ ರಕ್ತದಲ್ಲಿ ಗ್ಲುಕೋಸ್‌ನ ಅಂಶ ಹೆಚ್ಚಿರುತ್ತದೆ. ಹಾಗಾಗಿ ಅದನ್ನು ನಿಯಂತ್ರಣದಲ್ಲಿಡಲು ಇನ್ಸುಲಿನ್ ಅಥವಾ ಕೆಲವು ಔಷಧಿಗಳನ್ನು ಕೃತಕವಾಗಿ ಕೊಡಬೇಕಾಗುತ್ತದೆ. ಇಂಥಹವರಲ್ಲಿ ಒಂದು ವೇಳೆ ಸೇವಿಸಿದ ಔಷಧದ ಅನುಪಾತವು ರಕ್ತದಲ್ಲಿರುವ ಗ್ಲುಕೋಸಿನ ಅಂಶಕ್ಕಿಂತ ಹೆಚ್ಚಾದರೆ, ಆಗ ಔಷಧಿಯ ಪರಿಣಾಮದಿಂದಾಗಿ ರಕ್ತದಲ್ಲಿ ಗ್ಲುಕೋಸಿನ ಮಟ್ಟ ಕಡಿಮೆಯಾಗುತ್ತದೆ. ಇದನ್ನು hypoglycaemia ಎಂದು ಕರೆಯುವರು.

ನಿತ್ಯವೂ ತೆಗೆದುಕೊಳ್ಳುವ ಮಧುಮೇಹದ ಔಷಧ ತೆಗೆದುಕೊಂಡ ಮೇಲೆ ಆಹಾರ ಸೇವಿಸುವುದರಲ್ಲಿ ವಿಳಂಬವಾಗುವುದು ರಕ್ತದಲ್ಲಿ ಗ್ಲುಕೋಸಿನ ಅಂಶ ಕಡಿಮೆಯಾಗಲು ಮುಖ್ಯ ಕಾರಣ. ತೆಗೆದುಕೊಳ್ಳಬೇಕಾದ ಪ್ರಮಾಣಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಔಷಧಿ ಸೇವನೆ ಇನ್ನೊಂದು ಮುಖ್ಯ ಕಾರಣ. ಸರಿಯಾದ ಪ್ರಮಾಣದಲ್ಲಿ ಔಷಧಿ, ಆಹಾರ ಸೇವನೆಯಾಗಿದ್ದರೂ ನಿತ್ಯಕ್ಕಿಂತ ಹೆಚ್ಚಿಗೆ ದೈಹಿಕ ಶ್ರಮ ಮಾಡಿದರೆ ಆಗ ರಕ್ತದಲ್ಲಿನ ಗ್ಲುಕೋಸ್ ಜೀವಕೋಶಗಳಿಂದ ಹೆಚ್ಚಿಗೆ ಬಳಕೆಯಾಗಿ ರಕ್ತದಲ್ಲಿ ಗ್ಲುಕೋಸಿನ ಮಟ್ಟ ಕಡಿಮೆಯಾಗುತ್ತದೆ. ಜ್ವರ, ವಾಂತಿಯಂತಹಾ ಖಾಯಿಲೆ ಬಂದಾಗಲೂ hypoglycemia ಆಗುವ ಸಂದರ್ಭ ಹೆಚ್ಚು.

ಎದೆ ಬಡಬಡನೆ ಹೊಡೆದುಕೊಳ್ಳುವುದು, ಕೈಕಾಲುಗಳು ನಡುಗುವುದು, ಮೈ ಬೆವರುವುದು ರಕ್ತದಲ್ಲಿ ಗ್ಲುಕೋಸಿನ ಮಟ್ಟ ಕಡಿಮೆಯಾಗುತ್ತಿರುವ ಮುನ್ಸೂಚನೆ. ಗ್ಲುಕೋಸಿನ ಮಟ್ಟ ಇನ್ನೂ ಕಡಿಮೆಯಾದರೆ ಕಣ್ಣು ಮಂಜಾಗಿ ಕಾಣಿಸುವುದು. ತಾನೆಲ್ಲಿದ್ದೇನೆ, ಏನು ಮಾಡುತ್ತಿದ್ದೇನೆಂದು ಅರಿಯದಂತಾಗಿ ಗಲಿಬಿಲಿ ಗೊಂಡಂತೆ ಕಾಣಿಸುವನು. ಇನ್ನೂ ಗ್ಲುಕೋಸ್ ಕಡಿಮೆಯಾದರೆ ಪ್ರಜ್ಞೆ ತಪ್ಪುವುದು. ಅಪಸ್ಮಾರ (fits) ಬರಬಹುದು.

ರಕ್ತದಲ್ಲಿ ಗ್ಲುಕೋಸಿನ ಪ್ರಮಾಣ ಕಡಿಮೆಯಾದ ಮೊದಲ ಲಕ್ಷಣ ಕಾಣಿಸಿದಾಗಲೆ ಸ್ವಲ್ಪವು ತಡಮಾಡದೆ ಹೊಟ್ಟೆಗೇನಾದರೂ ಆಹಾರ ಸೇವಿಸುವುದು ಅತೀ ಮುಖ್ಯ. ಯಾಕೆಂದರೆ ಪ್ರಜ್ಞೆ ತಪ್ಪುವ ಹಂತ ತಪುಪಿದರೆ ಹೀಗೆ ಸ್ವಯಂ ಚಿಕಿತ್ಸೆ ಮಾಡಿಕೊಳ್ಳಬಹುದಾದ ಹಂತ ದಾಟುತ್ತದೆ. ಹೀಗೆ ಪ್ರಜ್ಞೆ ತಪ್ಪಿದ ರೋಗಿಗೆ ಸಕ್ಕರೆಯನ್ನಾಗಲಿ ಗ್ಲುಕೋಸನ್ನಾಗಲಿ ತಿನ್ನಿಸಿದರೆ ಕೂಡಲೇ ಚೇತರಿಸಿಕೊಳ್ಳುವರು. ಆದರೆ ಈ ಹಂತದಲ್ಲಿ ಅವರು ಬಾಯಿಗೆ ಹಾಕಿದ್ದನ್ನು ನುಂಗುತ್ತಾರಾದರೆ ಮಾತ್ರಾ ಸ್ವಲ್ಪ ಸ್ವಲ್ಪವೇ ನಿಧಾನವಾಗಿ ಹಾಕಬೇಕು. ಏಕೆಂದರೆ ರೋಗಿಯು ಬಾಯಿಗೆ ಹಾಕಿದ್ದನ್ನು ನುಂಗದಿದ್ದರೆ ಆಹಾರ ಪದಾರ್ಥ ಶ್ವಾಸನಾಳಕ್ಕೆ ಹೋಗಿ ಪ್ರಾಣಾಪಾಯ ಸಂಭವಿಸಬಹುದು. ಇಂಥಹಾ ರೋಗಿಯನ್ನು ತಕ್ಷಣವೇ ಆಸ್ಪತ್ರೆಗೆ ಸೇರಿಸಿ ರಕ್ತನಾಳದ ಮೂಲಕ ಗ್ಲುಕೋಸ್ ಕೊಡುವುದೇ. ಸೂಕ್ತ ತುಂಬಾ ಹೊತ್ತು ರಕ್ತದಲ್ಲಿ ಗ್ಲುಕೋಸಿನ ಅಂಶ 30mgಗಿಂತಲೂ ಕಡಿಮೆಯಿದ್ದರೆ ಪ್ರಾಣಾಪಾಯವಾಗಬಹುದು.

ಕ್ಲಪ್ತಕಾಲದಲ್ಲಿ ಔಷಧ ಮತ್ತು ಆಹಾರ ತೆಗೆದುಕೊಳ್ಳುವುದು, ನಿಯಮಿತವಾದ ದೈಹಿಕ ಶ್ರಮ, ತಾನು ಸೇವಿಸಿದ ಆಹಾರದ ಪ್ರಮಾಣಕ್ಕೆ ಸರಿಯಾಗಿ ಔಷಧವನ್ನು ಹೊಂದಿಸಿ ಬಳಸುವುದು ಇತ್ಯಾದಿ, hypoglycaemiaವನ್ನು ತಡೆಗಟ್ಟುವ ಸುಲಭ ಉಪಾಯಗಳು. ಬೆಳಗಿನ ಜಾವದಲ್ಲಿ ಗ್ಲುಕೋಸ್ ಕಡಿಮೆಯಾಗುವ ಸಾಧ್ಯತೆ ಹೆಚ್ಚಿರುವುದರಿಂದ ಸಿಹಿಮೂತ್ರ ರೋಗಿಗಳು (ಮುಖ್ಯವಾಗಿ ರಾತ್ರಿ ಹೊತ್ತು ಔಷಧ ಸೇವಿಸುವವರು) ಬೆಳಗ್ಗೆ ಬೇಗನೆದ್ದು ಚಹಾ ಕುಡಿಯುವ ಅಭ್ಯಾಸ ಮಾಡಿಕೊಳ್ಳುವುದು ಒಳ್ಳೆಯದು. ನಿದ್ದೆಯಲ್ಲಿರುವಾಗ ಗ್ಲುಕೋಸ್ ಕಡಿಮೆಯಾದರೆ ಅದರ ಚಿಹ್ನೆಗಳು ಗೊತ್ತಾಗದೇ ಇರುವುದರಿಂದ ಎಂದೂ ಖಾಲಿ ಹೊಟ್ಟೆಯಲ್ಲಿ ನಿದ್ದೆ ಮಾಡಬಾರದು. ಹೊರಗೆ ಹೋಗುವಾಗ ಕಿಸೆಯಲ್ಲಿ ಚಾಕೊಲೇಟ್ ಅಥವಾ ಬಿಸ್ಕೆಟ್ ಇಟ್ಟುಕೊಂಡಿದ್ದರೆ ಗ್ಲುಕೋಸ್ ಕಮ್ಮಿಯಾದ ಮೊದಲ ಲಕ್ಷಣದಲ್ಲೇ ಸೇವಿಸಲಿಕ್ಕೆ ಸುಲಭವಾಗುತ್ತದೆ. ಹಾಗೆಯೇ ಒಬ್ಬರೇ ಹೊರಗೆ ಹೋಗುವಾಗ ತಾನೊಬ್ಬ ಸಕ್ಕರೆ ಕಾಯಿಲೆ ಇರುವವನು ಹಾಗೂ ಇಂತಹಾ ಔಷಧಿ ತೆಗೆದುಕೊಳ್ಳುತ್ತಿರುವವನು ಎಂಬ ಚೀಟಿಯನ್ನೇನಾದರು ಇಟ್ಟುಕೊಂಡಿದ್ದರೆ ಪ್ರಜ್ಞೆ ಕಳೆದುಕೊಂಡಿದ್ದ ಸಂದರ್ಭದಲ್ಲಿ ಸುತ್ತಮುತ್ತಲಿನವರಿಗೆ ಹಾಗೂ ವೈದ್ಯರಿಗೆ ರಕ್ತದಲ್ಲಿ ಗ್ಲುಕೋಸು ಕಮ್ಮಿಯಾಗಿ ಹೀಗಾಗಿರಬಹುದೆಂದು ಮೊದಲಿಗೇ ಊಹಿಸಲಿಕ್ಕೆ ಅನುಕೂಲವಾಗುತ್ತದೆ.

ಮೇದೋಜೀರಕ ಗ್ರಂಥಿಯಲ್ಲಿ ಕೆಲವೊಮ್ಮೆ ಇನ್ಸುಲಿನ್ ತಯಾರುಮಾಡುವ ಗಡ್ಡೆ (tumour) ಬೆಳೆದರೆ ಸಿಹಿಮೂತ್ರ ರೋಗಿಗಳಲ್ಲದವರಲ್ಲೂ ರಕ್ತದಲ್ಲಿ ಗ್ಲುಕೋಸ್‌ನ ಅಂಶ ಪದೇ ಪದೇ ಕಡಿಮೆಯಾಗುತ್ತದೆ. ಈ ಖಾಯಿಲೆಯನ್ನು ಸ್ಕ್ಯಾನ್ ಮೂಲಕ ಪತ್ತೆ ಹಚ್ಚಿ ಶಸ್ತ್ರ ಚಿಕಿತ್ಸೆಯಿಂದ ಗುಣಪಡಿಸಬಹುದು.

**ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು. ಸಂಚಾರಿ ದೂರವಾಣಿ ನಂ. : 98451 36322**

**ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.),** ಶಾರದಾನಗರ, ಕುಂಜಿಬೆಟ್ಟು, ಉಡುಪಿ.

## ಡಾ| ದಯಾನಂದ ಎಸ್. ರಾವ್ ಟ್ರಸ್ಟ್-ಸಾಲ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

ಡಾ| ದಯಾನಂದ ಎಸ್. ರಾವ್ ಎಜ್ಯುಕೇಶನ್ ಟ್ರಸ್ಟ್, ಬೆಂಗಳೂರು, ಇವರು ''ರತ್ನಾಬಾಯಿ ಸ್ಮಾರಕ ಸಾಲ ವಿದ್ಯಾರ್ಥಿವೇತನ''ಕ್ಕಾಗಿ ಉಡುಪಿ ಕುಂಜಿಬೆಟ್ಟಿನ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.),ಕ್ಕೆ ಸಾಲ ವಿದ್ಯಾರ್ಥಿವೇತನ ನೀಡಲು ನಗದು ಹಣವನ್ನು ಒದಗಿಸಿದ್ದಾರೆ. ಈ ಮೊಬಲಗನ್ನು ಟ್ರಸ್ಟ್‌ನ ನಿಬಂಧನೆಯಂತೆ ಕಲಿಕೆ ಸಮಯದಲ್ಲಿ ಬಡ್ಡಿ ರಹಿತ ಸಾಲ ರೂಪದಲ್ಲಿ ವಿದ್ಯಾರ್ಥಿಗಳಿಗೆ ನೀಡಲಾಗುವುದು. 2011-2012ನೇ ಶೈಕ್ಷಣಿಕ ಸಾಲಿನಲ್ಲಿ ವೃತ್ತಿಪರ ತರಗತಿಗಳಿಗೆ ಸೇರಿದ ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಯ ಇಂಜಿನಿಯರಿಂಗ್, ಮೆಡಿಕಲ್, ಇತ್ಯಾದಿ ತರಗತಿಗಳ ವಿದ್ಯಾರ್ಥಿಗಳಿಗೆ ಈ ಸಾಲ ವಿದ್ಯಾರ್ಥಿವೇತನವನ್ನು ನೀಡಲಾಗುವುದು. ಅವರ ಅಗತ್ಯತೆ, ಆರ್ಥಿಕ ಸ್ಥಿತಿಗತಿ ಮತ್ತು ಪ್ರತಿಭೆಯನ್ನಾಧರಿಸಿ ಸಾಲ ಮಂಜೂರು ಮಾಡಲಾಗುವುದು. ಸಾಲ ವಿದ್ಯಾರ್ಥಿ ವೇತನವನ್ನು ವಿದ್ಯಾರ್ಥಿಯ ಮುಂದಿನ ವರ್ಷಗಳ ಪ್ರಗತಿಯನ್ನು ಪರಿಶೀಲಿಸಿ ಪೂರ್ಣ ಅಧ್ಯಯನ ಅವಧಿಯಲ್ಲಿ ಮುಂದುವರಿಸಲಾಗುವುದು.

ಸಾಲ ವಿದ್ಯಾರ್ಥಿವೇತನವನ್ನು ಪಡೆಯಲು ಆಸಕ್ತಿಯುಳ್ಳ ವಿದ್ಯಾರ್ಥಿಗಳು ತಮ್ಮ ಹೆಸರು, ರಕ್ಷಕರ ಹೆಸರು, ಪರೀಕ್ಷೆಯ ಅಂಕಪಟ್ಟಿ ಹಾಗೂ ವಿದ್ಯಾಭ್ಯಾಸ ಮಾಡುವ/ಮುಂದುವರಿಸುವ ಬಗ್ಗೆ ದಾಖಲೆಯೊಂದಿಗೆ (ವ್ಯಾಸಂಗ ಪ್ರಮಾಣ ಪತ್ರ) ಈ ಕೆಳಗಿನ ವಿಳಾಸಕ್ಕೆ ತಾ.15-09-2011ರ ಒಳಗೆ ತಲುಪುವಂತೆ ಕಳುಹಿಸಬೇಕು.

**ವಿ.ಸೂ. : ಕಳೆದ ಸಾಲಿನಲ್ಲಿ ಸಾಲ ವಿದ್ಯಾರ್ಥಿ ವೇತನ ಪಡೆದುಕೊಂಡ ಅಭ್ಯರ್ಥಿಗಳು ನವೀಕರಣಕ್ಕಾಗಿ ಕಳೆದ ಸಾಲಿನ ತಮ್ಮ ವ್ಯಾಸಂಗದ ಪ್ರಗತಿಯ ವಿವರ ಹಾಗೂ ಪ್ರಸಕ್ತ ಸಾಲಿನ ವ್ಯಾಸಂಗ ಪತ್ರದ ಜೊತೆಗೆ ಅರ್ಜಿ ಸಲ್ಲಿಸಬೇಕು. ವ್ಯಾಸಂಗ ಪೂರೈಸಿದ ವಿದ್ಯಾರ್ಥಿಗಳು ಮರುಪಾವತಿಸುವ ಬಗ್ಗೆ ಶ್ರೀ ಶಾರದಾ ಮಂಟಪ ಅಥವಾ ಶ್ರೀ ಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿಯಲ್ಲಿ ವಿಚಾರಿಸಬಹುದು.**

**ಸಂಚಾಲಕರು,** ವಿದ್ಯಾರ್ಥಿ ವೇತನ ವೇದಿಕೆ, ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.),
ಶ್ರೀ ಶಾರದಾ ಮಂಟಪ ಕುಂಜಿಬೆಟ್ಟು ಉಡುಪಿ - 576 102. ಫೋನ್ : 0820-2520754

---

**ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.),** ಶಾರದಾನಗರ, ಕುಂಜಿಬೆಟ್ಟು, ಉಡುಪಿ.

ವಿದ್ಯಾರ್ಥಿ ವೇತನ ವೇದಿಕೆ

## ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

ಪದವಿಪೂರ್ವ, ಪದವಿ, ಸ್ನಾತಕೋತ್ತರ, ಡಿ.ಎಡ್., ಬಿ.ಎಡ್., ಡಿಪ್ಲೋಮಾ, ಇಂಜಿನಿಯರಿಂಗ್, ವೈದ್ಯಕೀಯ, ವೇದ ತರಗತಿಗಳಲ್ಲಿ ಕಲಿಯುತ್ತಿರುವ, ಹೆತ್ತವರ ವಾರ್ಷಿಕ ಆದಾಯವು ರೂ.60,000/-ಕ್ಕೆ ಮೀರದ (ಅರ್ಜಿ ಸಲ್ಲಿಸುವಾಗ ಈ ವಿಚಾರವನ್ನು ಅಭ್ಯರ್ಥಿಗಳು ದಯವಿಟ್ಟು ಗಮನಿಸಬೇಕು) ವಿದ್ಯಾರ್ಥಿಗಳಿಂದ ವಿದ್ಯಾರ್ಥಿವೇತನಕ್ಕೆ ಅರ್ಜಿಯನ್ನು ಆಹ್ವಾನಿಸಲಾಗಿದೆ. ಅರ್ಜಿಯ ಜೊತೆಯಲ್ಲಿ ಹಿಂದಿನ ತರಗತಿಯ ಅಂಕಪತ್ರ ಹಾಗೂ ಪ್ರಸಕ್ತ ಕಲಿಯುತ್ತಿರುವ ಶಾಲೆಯ ಮುಖ್ಯಸ್ಥರ ಪ್ರಮಾಣಪತ್ರವನ್ನು ಒದಗಿಸಬೇಕು. ಅರ್ಜಿ ಫಾರಂಗಳು ಶ್ರೀಶಾರದಾ ಮಂಟಪದ ಕಛೇರಿಯಲ್ಲಿ ಲಭ್ಯವಿದೆ. ಅರ್ಜಿ ಫಾರಂಗಳನ್ನು ತುಂಬಿಸಿ ಸಂಬಂಧಪಟ್ಟ ದಾಖಲೆಗಳೊಂದಿಗೆ ತಾ.15-9-2011ರ ಒಳಗೆ ಸಂಘದ ಕಛೇರಿಗೆ ಕಳುಹಿಸುವುದು.

ವಿದ್ಯಾರ್ಥಿವೇತನ ಪಡೆದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನದ ಮೊಬಲಗನ್ನು ಹಿಂದಿನ ವರ್ಷದಂತೆಯೇ ಎಂ.ಓ. ಮೂಲಕ ಕಳುಹಿಸಲಾಗುವುದು.

**- ಅಧ್ಯಕ್ಷರು, ವಿದ್ಯಾರ್ಥಿವೇತನ ವೇದಿಕೆ, ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ - 576 101.**

---

## ಶ್ರೀ ಸುಬ್ರಹ್ಮಣ್ಯ ಸಭಾ, ಬಿಜೈ ಚರ್ಚು ರಸ್ತೆ, ಮಂಗಳೂರು

ಜಗದ್ಗುರು ಶ್ರೀ ಭಾರತೀ ತೀರ್ಥ ಸ್ವಾಮಿಜಿಗಳ ಚಾತುರ್ಮಾಸ ಪ್ರಯುಕ್ತ ಶ್ರೀ ಸುಬ್ರಹ್ಮಣ್ಯ ಸಭಾದ ವತಿಯಿಂದ ಶೃಂಗೇರಿ ಪ್ರವಾಸ ಆಯೋಜಿಸಲಾಗಿದೆ. ತಾ.28-08-2011ರ ಆದಿತ್ಯವಾರದಂದು ಬೆಳಿಗ್ಗೆ 6 ಗಂಟೆಗೆ ಶ್ರೀ ಸಭಾದಿಂದ ಬಸ್ಸಿನಲ್ಲಿ ಹೊರಟು ಸಂಜೆಯ ವೇಳೆಗೆ ಹಿಂತಿರುಗುವುದು. ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ವಿನಂತಿಸುತ್ತೇವೆ. ವ್ಯವಸ್ಥೆಯ ದೃಷ್ಟಿಯಿಂದ ಸಾಕಷ್ಟು ಮುಂಚಿತವಾಗಿ ತಮ್ಮ ಹೆಸರನ್ನು ನೋಂದಾಯಿಸಲು ಕೋರಲಾಗಿದೆ.

**ಪ್ರವಾಸದ ಶುಲ್ಕ ಒಬ್ಬರಿಗೆ : ರೂ.200/-, 5ರಿಂದ 10 ವರುಷದೊಳಗಿನ ಮಕ್ಕಳಿಗೆ ರೂ.100/-**

ಹೆಚ್ಚಿನ ವಿವರಗಳಿಗೆ ಶ್ರೀ ಅನಿಲ್‌ರಾವ್ ಬಿ.ಎಸ್ (ಮೊಬೈಲ್ : 9880037110), ಶ್ರೀ ಪಿ. ಶ್ರೀಕಾಂತ ರಾವ್ (ಮೊಬೈಲ್ : 9343361618) ಇವರನ್ನು ಸಂಪರ್ಕಿಸಬೇಕಾಗಿ ಕೋರಲಾಗಿದೆ.

---

## ದಿ| ಕೆಡೆಂಜಿ ಭಾಗೀರಥಿ ದಾಮೋದರ ಶಾಸ್ತ್ರಿ ಪ್ರತಿಷ್ಠಾನ, ಕುಳಾಯಿ

## ಪ್ರತಿಭಾ ಪುರಸ್ಕಾರ

2010-11ರ ಸಾಲಿನ ಶೈಕ್ಷಣಿಕ ವರ್ಷದ ಎಸ್.ಎಸ್.ಎಲ್.ಸಿ. ಹಾಗೂ ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ 85%ಕ್ಕೂ ಹೆಚ್ಚು ಅಂಕಗಳಿಸಿ (ವಿಶಿಷ್ಠ ಶ್ರೇಣಿ) ತೇರ್ಗಡೆಯಾದ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರನ್ನು ಶ್ರೀ ಸುಬ್ರಹ್ಮಣ್ಯ ಸಭಾ, ಬೆಜೈ ರಸ್ತೆ, ಮಂಗಳೂರು-3 ಇಲ್ಲಿ ದಸರಾ ಪ್ರಯುಕ್ತ ನಡೆಯುವ ನಾಡ ಹಬ್ಬದಂದು ಮೇಲೆ ತಿಳಿಸಿದ ಪ್ರತಿಷ್ಠಾನದ ವತಿಯಿಂದ ಪುರಸ್ಕರಿಸಲಾಗುವುದು. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಆಸಕ್ತ ಅರ್ಹ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರು ತಮ್ಮ ಅಂಕಪಟ್ಟಿಯ ಯಥಾ ನಕಲು, ವಿಳಾಸ, ದೂರವಾಣಿ ಸಂಖ್ಯೆ ಇವುಗಳನ್ನು ತಾ.30-9-2011ರ ಒಳಗಾಗಿ ಈ ಕೆಳಗಿನ ವಿಳಾಸಕ್ಕೆ ತಲುಪಿಸಲು ಕೋರಲಾಗಿದೆ. ನಾಡಹಬ್ಬದ ದಿನಾಂಕ 16-10-2011ರವಿವಾರ.

**ಕೆ. ಸದಾಶಿವ ಶಾಸ್ತ್ರಿ, 3-68(7), ಶ್ರೀ ವಿಷ್ಣುಮೂರ್ತಿ ದೇವಸ್ಥಾನ ರಸ್ತೆ, ಕುಳಾಯಿ ಅಂಚೆ, ಮಂಗಳೂರು-575019. ದೂ. : 0824-2408544**

---

## ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು, ಉಡುಪಿ

### ಈ ತಿಂಗಳ ಕಾರ್ಯಕ್ರಮಗಳು

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30 ಗಂಟೆಗೆ

ಪ್ರತಿ ಸೋಮವಾರ: **''ಸತ್ಸಂಗದವರಿಂದ ಭಜನೆ''** ಸಂಜೆ 6-00 ಗಂಟೆಯಿಂದ

ಪ್ರತಿ ಬುಧವಾರ : **''ಸೌಂದರ್ಯಲಹರಿ ಪಾರಾಯಣ''** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ **''ಪಾರಾಯಣ''** ಸಂಜೆ ಗಂಟೆ 4-30ರಿಂದ

**ಸಂಕಷ್ಟಹರ ಚತುರ್ಥಿಯಂದು (ತಾ.17-08-2011) ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

2ನೇ ಶನಿವಾರ : **ತಾ.10-09-2011 ''ಗಮಕವಾಚನ'' ಸಂಜೆ ಗಂಟೆ 5-00ರಿಂದ (ಶ್ರೀ ನೀಲಾವರ ಲಕ್ಷ್ಮೀನಾರಾಯಣ ರಾವ್ ಹಾಗೂ ಶ್ರೀ ಬಾರ್ಕೂರು ನಾಗೇಶ ರಾವ್‌ರವರಿಂದ)**

**ತಾ.19-09-2011 ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ತಾ.03-09-2011 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

---

## ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)

**ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408**

### 2010-11ನೇ ಸಾಲಿನ ವಾರ್ಷಿಕ ಮಹಾಸಭೆಯ ನೋಟೀಸು

**ಮಾನ್ಯ ಸದಸ್ಯರೇ,** **ತಾ.19-07-2011**

**ನಮ್ಮ ಸೊಸೈಟಿಯ 2010-11ನೇ ಸಾಲಿನ ವಾರ್ಷಿಕ ಮಹಾಸಭೆಯು ತಾ.18-09-2011ನೇ ರವಿವಾರ ಬೆಳಿಗ್ಗೆ 10-30 ಗಂಟೆಗೆ ನಮ್ಮ ಕಛೇರಿಯಿರುವ ಭೂವರಾಹ ಸಂಕೀರ್ಣದಲ್ಲಿ ನಡೆಯಲಿದೆ. ಸದಸ್ಯರೆಲ್ಲರೂ ಈ ಸಭೆಯಲ್ಲಿ ತಪ್ಪದೇ ಹಾಜರಿರಬೇಕಾಗಿ ವಿನಂತಿ.**

**ಆಡಳಿತ ಮಂಡಳಿಯ ನಿರ್ಣಯದಂತೆ**

| | |
|---|---|
| **ಪಟ್ಟಾಭಿರಾಮ ಎನ್.ಎಸ್.** | **ಎಂ. ಸದಾನಂದ ರಾವ್** |
| ಕಾರ್ಯದರ್ಶಿ | ಅಧ್ಯಕ್ಷರು |

**ವಿಷಯ ಸೂಚಿ**

1. ಮಹಾಸಭೆಯ ನೋಟೀಸನ್ನು ಓದಿ ಅಂಗೀಕರಿಸುವುದು
2. ತಾ.26-09-2010ರಂದು ಜರಗಿದ ಮಹಾಸಭೆಯ ವರದಿಯ ಅಂಗೀಕಾರ
3. 2010-2011ನೇ ಸಾಲಿನ ವಾರ್ಷಿಕ ವರದಿಯ ಅಂಗೀಕಾರ.
4. 2010-2011ನೇ ವರ್ಷದ ಅಪರಿಶೋಧಿತ ಲಾಭ-ನಷ್ಟ ತಃಖ್ತೆ ಮತ್ತು ಆಸ್ತಿ-ಜವಾಬ್ದಾರಿಗಳ ತಃಖ್ತೆಯ ಪರಿಶೀಲನೆ ಮತ್ತು ಅಂಗೀಕಾರ.
5. 2010-2011ನೇ ಸಾಲಿನ ಅಂದಾಜು ಆಯವ್ಯಯ ತಃಖ್ತೆಗಿಂತ ಹೆಚ್ಚಾದ ವೆಚ್ಚಗಳ ಪರಿಶೀಲನೆ ಮತ್ತು ಮಂಜೂರಾತಿ.
6. 2011-2012ನೇ ಸಾಲಿನ ಅಂದಾಜು ಆಯವ್ಯಯ ಪಟ್ಟಿಯ ಅಂಗೀಕಾರ
7. ಅಧ್ಯಕ್ಷರ ಅನುಮತಿ ಮೇರೆಗೆ ಮಹಾಸಭೆಯ ವ್ಯಾಪ್ತಿಗೆ ಒಳಪಟ್ಟು ಬರಬಹುದಾದ ಇತರ ವಿಷಯಗಳು. ಚರ್ಚೆಯ ವಿಷಯಗಳಿದ್ದರೆ ಸದಸ್ಯರು ಮಹಾಸಭೆಯ ದಿನಾಂಕದ ಐದು ದಿನಗಳ ಮೊದಲು ತಲುಪುವಂತೆ ಬರಹ ಮೂಲಕ ಸೊಸೈಟಿಯ ಅಧ್ಯಕ್ಷರಿಗೆ ಅಥವಾ ಕಾರ್ಯದರ್ಶಿಯವರಿಗೆ ಸೊಸೈಟಿಯ ಕಛೇರಿಯಲ್ಲಿ ಸಲ್ಲಿಸತಕ್ಕದ್ದು.

**ಲಾಭಾಂಶ : 2004-2005ರಿಂದ 2009-2010ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದೇ ಇರುವ ಸದಸ್ಯರು ಸೊಸೈಟಿಯ ವ್ಯವಹಾರದ ವೇಳೆಯಲ್ಲಿ ಬಂದು ಪಡೆದುಕೊಳ್ಳಬಹುದು. 2004-05ನೇ ಸಾಲಿನ ಲಾಭಾಂಶ ಪಡೆದುಕೊಳ್ಳದೇ ಇದ್ದವರು ಅದನ್ನು ಪಡೆದುಕೊಳ್ಳಲು ಕೊನೆಯ ದಿನಾಂಕ 31-10-2011.**

---



RAJESH POWER PRESS
PRINTERS & PUBLISHERS
DARBE, PUTTUR, DA. KA. -574 202.
KARNATAKA STATE, SOUTH INDIA.
Ph :(08251) 231696, 231697 & 322386
E-mail :msraghunathrao@hotmail.com
QUALITY FIRST AND ALWAYS

Owned & Published by : B. Krishnamoorthy Rao, Ambalpady - Secretary Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Edited by Y. Mohan Rao, Designed @ SriNidhi Computer Graphics, Bailur, Udupi, Printed at Agrahara Offsets, Udupi - 576 101. E-mail : srisharadaudupi@yahoo.co.in Website : www.srisharada.org